ಕರ್ನಾಟಕ ಸರ್ಕಾರ

ನೆಗೆ ಬೇಕು ಕೇದಗೆ ಗೊನೆ ಹಾಂಗೆ

ಬಾಕನ ಹೋಕನ ನಡುಲಿ ಸಿಕ್ಕಿರಿಕನ
ಸಣ್ಣದಾದರು ಒಂದು ನೆಗೆ ಬೇಕು



ಕರುಣಾಕರ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ನೆಗೆ ಬೆಳು ಕೆಬಿಗೆ ಸೊನೆ ಹಾಂಗೆ

ಡಾ. ಕರುಣಾಕರ ನಿಡಿಂಜಿ

2019

ಪ್ರಕಾಶಕರು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮಡಿಕೇರಿ, ಕೊಡಗು ಜಿಲ್ಲೆ - 571 201

'NEGEBEKU KEDEGE GONE HANGE'
a collection of Poetry in Arebase Language
written by **Dr. Karunakara Nidinji**
Nidinji House, Urubailu Chembu Village, Kodagu
Mobile : 9880866398

Published by : Arebase Samskrithi Mathu Sahitya Academy

ಪ್ರಕಟಣೆ : 2019

ಪ್ರತಿಗಳು : 500 ಬೆಲೆ : ರೂ. 80–00 Price : Rs. 80–00

ಪುಟಗಳು : 14 + 47

ಸಲಹಾ ಸಮಿತಿ :

ಶ್ರೀ ಎ. ಕೆ. ಹಿಮಕರ
ಶ್ರೀ ಪರಶುರಾಮ ಚಿಲ್ತಡ್ಕ
ಶ್ರೀಮತಿ ತಿರುಮಲೇಶ್ವರಿ
ಶ್ರೀಮತಿ ಶ್ವೇತಾ ಮಡಪ್ಪಾಡಿ

ಪ್ರಕಾಶಕರು :
ರಿಜಿಸ್ಟ್ರಾರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಪುಸ್ತಕ ದೊರೆಯುವ ಸ್ಥಳ :
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ
ದೂರವಾಣಿ : 08272 - 223055

ಮುಖಪುಟ : **ಶ್ರೀ ಮೋಹನ ಸೋನ**

ಮುದ್ರಣ :
ರಾಜೇಶ್ ಪವರ್ ಪ್ರೆಸ್
ದರ್ಬೆ, ಪುತ್ತೂರು, ದ. ಕ., 574 202
ದೂರವಾಣಿ : 08251 - 231696 / 231697

ಅಧ್ಯಕ್ಷರ ಮಾತ್ :

ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಇದೀಗ ಮೂರನೇ ತಂಡದ ಅಧಿಕಾರವಧಿಲಿ ನಡೀತಾ ಉಟ್ಟು. ಈ ಹಿಂದೆನ ಸಮಿತಿನವೂ ಬಾರೀ ಒಳ್ಳೊಳ್ಳ ಕಾರ್ಯಕ್ರಮನ ಹಾಕಿಕಂಡ್ ಬಾಸೆಗೂ, ಅಕಾಡೆಮಿಗೂ ಬಾರೀ ಹೆಸ್ರ್‌ನ ತಂದ್ ಕೊಟ್ಟೊಳೊ, ನಾವುಗೆ ಒಳ್ಳ ಅಡಿಹಾಕಿ ಕೊಟ್ಟೊಳೊ. ಈಗ ನಾವು ಅದಕ್ಕಿಂತಲೂ ಒಳ್ಳೊಳ್ಳ ಕಾರ್ಯಕ್ರಮನ ರೂಪಿಸಿಕಂಡ್ ಸುಳ್ಯ, ಕೊಲ್ಲಮೊಗ್ರ, ಹಾಲೆಮಜಲ್, ಸುಬ್ರಹ್ಮಣ್ಯ, ಪುತ್ತೂರು, ದೇವಸ್ತೂರ್, ಮಡಿಕೇರಿ ಮತ್ತೆ ದುಗ್ಗಲಡ್ಕಲಿ ಬೇರೆ ಬೇರೆ ಕಾರ್ಯಕ್ರಮನ ಹಾಕಿ ಯಶಸ್ವಿಯಾಗಿ ನಡ್ಸಿಯೊಳೊ. ಅಕಾಡೆಮಿನ ಕಾರ್ಯಕ್ರಮಗಳಿಗೆ ಅರೆಬಾಸೆನವು ಮಾತ್ರ ಅಲ್ಲದೆ ಬೇರೆ ಬೇರೆ ಜಾತಿ ಧರ್ಮದವು, ಬೇರೆ ಬೇರೆ ಮನೆಮಾತ್ ಇಸಿಕಂಡವು ಬಂದ್ ಭಾಗವಹಿಸ್ಯೊಳೊ. ಸುಳ್ಯಲಿ ಅರೆಬಾಸೆನೇ ರಾಜಬಾಸೆ. ಎಲ್ಲಾ ಜಾತಿ ಜನಾಂಗದವುನೂ ಮಾರ್ಗಲಿ, ಆಪೀಸ್‌ಲಿ ಪ್ರೀತಿ ಗೌರವಂದ ಅರೆಬಾಸೆನ ಮಾತಾಡ್ತಾ ಒಳೊ. ಈಗ ನಮ್ಮ ಬಾಸೆನ ಹೆಮ್ಮೆಂದ ಮತಾಡುವಂತ ಪರಿಸ್ಥಿತಿ ಬರ್‍ತಾವುಟ್ಟು.

ಮುಂದೆ ನಾವ್ ನಮ್ಮ ಬಾಸೆಗೆ ಅಲ್ಪಸಂಖ್ಯಾತ ಬಾಸೇಂತ ಸರಕಾರ ಗಣನೆಗೆ ತಕಕುಂತೇಳಿ ಒತ್ತಾಯ ಮಾಡುವೆ ಮತ್ತು ನಮ್ಮ ಬಾಸೆನ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್‍ಸೋಕೂಂತ ಒತ್ತಾಯ ಮಾಡ್ತಾ ಒಳೊ. ಇದೇ ಉದ್ದೇಶನ ಮುಖ್ಯವಾಹಿನಿಗೆ ತಂದ್ ಜನಮನ್ನಣೆಗೆ, ಜನಮತ ಗಣನೆಗೆ ಸುಳ್ಯಲಿ ಅರೆಬಾಸೆ ಸಾಹಿತ್ಯ ಸಮ್ಮೇಳನ ನಡ್ಸ್‌ತಾ ಒಳೊ. ಈ ಸಮ್ಮೇಳನಕೆ ಬಾರೀ ಸಂಖ್ಯೆಲಿ ಜನಬೆಂಬಲ ಸಿಕ್ಕುಟು. ಬೇರೆ ಬೇರೆ 5 ಪುಸ್ತಕಗ ಬಿಡುಗಡೆ ಆತ್. ಕವಿಗೋಷ್ಠಿ ನಡ್ದದೆ. ಗಣ್ಯಾತಿಗಣ್ಯರ್ ಸೇರುವೆ.

ಇಂದ್, ಡಾ. ನಿಡಿಂಜಿ ಕರುಣಾಕರ ಗೌಡ್ರ್ ಬರ್ದ "ನೆಗೆಬೇಕು ಕೇದೆಗೆ ಗೊನೆ ಹಾಂಗೆ" ಎಂಬ ಹೆಸ್ರ್‌ನ ಕವನ ಸಂಕಲನ ನಾವು ಬಿಡುಗಡೆ ಮಾಡ್ಯೊಳೊ. ಕರುಣಾಕರನೊವು ನಮ್ಮ ಹಲವಾರ್ ಕಾರ್ಯಕ್ರಮಗಳಿಗೆ ಬಂದೊಳೊ. ಅವು ಬರ್ದ ಈ ಪುಸ್ತಕನ ಅಕಾಡೆಮಿ ಮುದ್ರಣ ಮಾಡಿಕೆ ಪುಸ್ತಕ ಪ್ರಕಟಣಾ ಸಮಿತಿನವು ತೀರ್ಮಾನ ಮಾಡ್ದ ಕಾರಣ ಇಂದ್ ಇದ್ ನಿಮ್ಮ ಕೈಲಿ ಉಟ್ಟು. ಈ ಪುಸ್ತಕನ ಎಲ್ಲವೂ ತಕಂಡ್ ಓದೊಕು. ಆ ಮೂಲಕ ಅರೆಬಾಸೆನ ಬೆಳವಣಿಗೆಗೆ ನೀವು ಸಹಕಾರ ಕೊಡೋಕು. ಶ್ರೀ ಕರುಣಾಕರ ಗೌಡ್ರ್‌ಗೆ ಅಭಿನಂದನೆಗ.

ಸುಳ್ಯ
ಮಾರ್ಚ್ 2, 2019

ಪಿ. ಸಿ. ಜಯರಾಮ, ಅಧ್ಯಕ್ಷರ್
ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಸಂಚಾಲಕರ ಮಾತ್ :

ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸ್ಥಾಪನೆ ಆದ್ದೇ ಮೂರು ಮುಖ್ಯ ಉದ್ದೇಶಕ್ಕಾಗಿ. ಒಂದು ಅಧ್ಯಯನ, ಎರಡ್ ಸಂಶೋಧನೆ, ಮೂರ್ನೆದ್ ಪ್ರಕಾಶನ. ನಮ್ಮ ಅಕಾಡೆಮಿ ಇದೀಗ ಅಧ್ಯಯನ ಮತ್ತೆ ಸಂಶೋಧನೆ ಸುರು ಮಾಡ್ತಾ ಉಟ್ಟು. ನಮ್ಮ ಸಂಸ್ಕೃತಿ ಮತ್ತೆ ಸಮಾಜದ ಬಗ್ಗೆ ಒಟ್ಟು ಹತ್ತ್ ಅಧ್ಯಯನಗ ಏಕಕಾಲಕ್ಕೆ ನಡೀತಾ ಒಳೊ. ಹತ್ತ್ ಜನ ಸಂಶೋಧಕರ್ ಅಧ್ಯಯನ ಮಾಡಿಕಂಡ್ ಒಳೊಂತೇಳುದೇ ಹೆಗ್ಗಳಿಕೆ. ಹಾಂಗೆನೇ ಇನ್ನ್ ಹತ್ತ್‌ಜನಕ್ಕೆ ಫೆಲೋಶಿಪ್ ಕೊಡುವ ಯೋಜನೆನೂ ಉಟ್ಟು. ಈ ಅಧ್ಯಯನಗ ಮುಗ್ದ ಮೇಲೆ ಒಳ್ಳೊಳ್ಳೆ ಸಂಶೋಧನಾ ಗ್ರಂಥಗ ಬಾಕೆ ಒಳೊ.

ಅಕಾಡೆಮಿನ ಇನ್ನೊಂದು ಗುರಿ ಸೃಜನಶೀಲ ಸಾಹಿತ್ಯ ರಚನೆಗೆ ಪ್ರೋತ್ಸಾಹ ಕೊಡ್ದು. ನಮ್ಮೊಲ್ಲಿ ಒಳ್ಳೊಳ್ಳ ಸಾಹಿತ್ಯ ಕೃತಿಗ ಇದೀಗ ಬಾಕೆ ಸುರಾಗುಟು. ಇತ್ತೀಚೆಗೆ ಬೇಟೆ ಸಾಹಿತ್ಯದ ಬಗ್ಗೆ ಕೆ. ಆರ್. ತೇಜಕುಮಾರ್ ಬರ್ದ **'ಕಾಡ್‌ನ ಮಕ್ಕ'** ಕೊಲ್ಲಮೊಗ್ರಲಿ ಬುಡುಗಡೆ ಆಗುಟು. ಪ್ರಸಿದ್ಧ ಕಾದಂಬರಿಗಾರ್ತಿ ಎಂ. ಜಿ. ಕಾವೇರಮ್ಮನವು ಬರ್ದ "ಬೊಡ್ಕ್" ಹೊರ ಬಂದುಟು. ಹಾಂಗೆನ ವಿನೋದ್ ಮೂಡಗದ್ದೆ ಬರ್ದ ಪುಸ್ತಕನ ಅಕಾಡೆಮಿ ಮುದ್ರಣ ಮಾಡ್ಸಿಟು.

ಈಗ 5 ಪುಸ್ತಕಗಳ ಒಂದು ಕಂತೆ 2019ರ ಮಾರ್ಚ್ 2ರಂದ್ ಸುಳ್ಯಲಿ ಲೋಕಾರ್ಪಣೆ ಮಾಡಿಕೆ ಅಕಾಡೆಮಿ ನಿರ್ಣಯ ಮಾಡಿಟು. ಕೋಡಿಯವು ಬರ್ದ **ಅರೆಬಾಸೆ ವ್ಯಾಕರಣ ಪುಸ್ತಕ**, ಪಿ.ಜಿ. ಅಂಬೆಕಲ್ ಬರ್ದ **" ತಬ್ಲಿ ಮಂಜ"** ಕತೆ ಪುಸ್ತಕ, **"ಅಪ್ಪ ಹೇಳ್ದ ಹತ್ತ್ ಕತೆಗ"** ಅಡ್ತಲೆ ಭವಾನಿ ಶಂಕರನವರ್ದ್, ಡಾ. ನಿಡಿಂಜಿ ಕರುಣಾಕರನವರ **'ನೆಗೆಬೇಕು ಕೇದಗೆ ಗೊನೆ ಹಾಂಗೆ'** (ಕವನ) ಮತ್ತೆ ಡಾ. ಪುನೀತ್ ಅವರ **'ಮಿಣ್ಬುಳಿ'** ಕತೆಗಳ ಪುಸ್ತಕ ಒಂದೇ ದಿನ ಬಂದದೆ.

ಡಾ। ನಿಡಿಂಜಿ ಅರೆಬಾಸೆ ಸಾಹಿತ್ಯದ ಗಟ್ಟಿಕಾಳ್. ಈಗಾಗ್ಲೆ ಅವೇ ಬರ್ದ್ ಪ್ರಕಟಣೆ ಮಾಡ್ದ **'ನೀಲಿ ದಾರಿ'**ಂತೇಳುವ ಕವನ ಸಂಕಲನ ಅವರ ಗಟ್ಟಿತನನ ಸಾಬೀತ್ ಮಾಡಿಟ್ಟು. ಈಗ ನಿಮ್ಮ ಕೈಲಿರುವ ಕವನ ಸಂಕಲನ ಒಳ್ಳ ಬರವಣಿಗೆಂತೇಳುವ ನೆಲೆಲಿ ಅಕಾಡೆಮಿ ಪ್ರಕಟಣೆ ಮಾಡಿಟ್ಟು. ಕಾವ್ಯದ ವಸ್ತು, ಇಸಯ, ಲಯ, ಬಾರೀ ಪೊರ್ಲುಟ್ಟು. ಈ ಕಾರಣಕ್ಕಾಗಿ ಅರೆಬಾಸೆನ ಇತರೇ ಕಾವ್ಯಗಳ್ಂದ ಇದ್ ಬೇರೆ ನಿತ್ತದೆ. ಅವರ್ದ್ ಶಿಸ್ತುಬದ್ಧ ಬರವಣಿಗೆ. ಅರೆಬಾಸೆ, ಕಾವ್ಯಕ್ಕೆ ಗಂಭೀರತೆನ ತಂದ್‌ಕೊಡುವ ಶಿಸ್ತ್ ಇಲ್ಲಿ ಬಾರೀ ಸೋಕುಲಿ ಕಂಡದೆ. ಅವುಕೆ ಅಭಿನಂದನೆಗ.

ಸುಳ್ಯ
ಮಾರ್ಚ್ 2, 2019

ಎ.ಕೆ. ಹಿಮಕರ, ಸಂಚಾಲಕ
ಪುಸ್ತಕ ಪ್ರಕಟಣಾ ಸಮಿತಿ

ಮುನ್ನುಡಿ

ಡಾ. ಕರುಣಾಕರ ನಿಡಿಂಜಿಯವರು ಈಗಾಗಲೇ 'ನೀಲಿದಾರಿ' ಎಂಬ ಕವನ ಸಂಕಲನದ ಮೂಲಕ ತನ್ನ ಸ್ವಂತಿಕೆಯನ್ನು ಪ್ರಕಟಿಸಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯ ಆ ಸಂಕಲನದ 'ಹೀಂಗೊಂದುಟ್ಟು ಸತ್ಯ' ಕವಿತೆಯನ್ನು ಪದವಿ ತರಗತಿಗಳ ಪಠ್ಯಪುಸ್ತಕದಲ್ಲಿ ಸೇರಿಸಿ ಅರೆಭಾಷೆಗೂ ಕೃತಿಕಾರನಿಗೂ ಮಾನ್ಯತೆ ನೀಡಿದೆ. ಈಗ ಎರಡನೆಯ ಸಂಕಲನದ ಕವಿತೆಗಳನ್ನು ನನ್ನ ಕೈಗಿತ್ತು, ಓದಿ ಬರೆಯಬೇಕೆಂದು ಕೇಳಿಕೊಂಡರು. ಓದುವ, ಬರೆಯುವ ಹವ್ಯಾಸಿ ನಾನಾಗಿರುವುದರಿಂದ ನಿರಾಕರಿಸಲಿಲ್ಲ. ಇಲ್ಲಿರುವ ಕವಿತೆಗಳು ಅರೆಬಾಸೆಯಲ್ಲಿವೆ. ನಾನು ಅವುಗಳ ಕುರಿತು ಅರೆಬಾಸೆಯಲ್ಲೇ ಬರೆಯಬೇಕಿತ್ತು. ಕರುಣಾಕರರು ಕನ್ನಡದಲ್ಲಿ ಬರೆಯುವಂತೆ ಸಲಹೆ ನೀಡಿದರು. ಅರೆಬಾಸೆಯಲ್ಲಿ ಪಾರಿಭಾಷಿಕ ಪದಗಳನ್ನು ಹುಡುಕುವ ಕೆಲಸ ತಪ್ಪಿಸಿದ ಅವರ ಸಲಹೆಯಂತೆ ಕನ್ನಡದಲ್ಲಿ ಬರೆದಿದ್ದೇನೆ. ಅರಿವು, ಅನುಭವ, ಅಧ್ಯಯನದ ಸಂಯೋಗದಿಂದ ರೂಪುಗೊಂಡಿರುವ ಕವಿತೆಗಳು ಕವಿಯ ಆಡುಭಾಷೆಯಲ್ಲಿ ಮಾತಾಡುತ್ತ ನಗುಮುಖಗಳನ್ನು ಕಾಣುವ ಉದ್ದೇಶ ಹೊಂದಿವೆ.

ಬಾಕನ ಹೋಕನ ನಡುಲಿ ಸಿಕ್ಕಿರಿಕನ
ಸಣ್ಣದಾದರು ಒಂದು ನೆಗೆ ಬೇಕು.

ಮುಖದಲ್ಲಿ ಸಣ್ಣ ನಗೆ ಇದ್ದರೆ ಅದು ಸ್ನೇಹಿತರನ್ನು ಗಳಿಸುತ್ತದೆ. ಹರ್ಷಚಿತ್ತವು ಹರ್ಷದ ಪರಿಸರವನ್ನು ಸೃಷ್ಟಿಸುತ್ತದೆ. ನಗೆಯ ಸಣ್ಣ ಸಣ್ಣ ತರಂಗಗಳನ್ನು ಇಲ್ಲಿರುವ ಕವಿತೆಗಳಲ್ಲಿ ಕಾಣುತ್ತೇವೆ. ಮತ್ತೆ ಮತ್ತೆ ನಗೆಗೀಡಾಗುವ ಸಾಂತಪ್ಪನ ಕುರಿತು ಕೆಲವು ಕವಿತೆಗಳಿವೆ. ಇವನ ಹೆಸರನ್ನು ಮೊಟಕು ಮಾಡಿ ಸಾಂತ ಎನ್ನುತ್ತಾರೆ. ನನ್ನ ದೃಷ್ಟಿಯಲ್ಲಿ ಸಾಂತ ತುಂಬ ಅರ್ಥಪೂರ್ಣವಾದ ಪದ. ಸ + ಅಂತ = ಸಾಂತ = ಮನುಷ್ಯ. ಯಾರಿಗೆ ಅಂತ್ಯವಿದೆಯೋ ಆವನು ಸಾಂತ (Mortal), ಮರ್ತ್ಯ, ಮಣ್ಣಾಗುವವನು. ಕಾವ್ಯ ಮಾತಾಡುವುದು ಸಾಂತನ ಕುರಿತು. ಮನುಷ್ಯನ ಸಂವೇದನೆ, ಚಹರೆ, ಸ್ಥಿತಿಗತಿಗಳನ್ನು ಕಾಣಿಸಲು ಕಾವ್ಯ ಪ್ರಯತ್ನಿಸುತ್ತಾ ಬಂದಿದೆ. ಸಾಂತತ್ವವೇ ಮನುಷ್ಯನ ಎಲ್ಲ ಚಟುವಟಿಕೆಗಳ ಮೂಲವಾಗಿದೆ. ಹೊರಟುಹೋಗುವ ಮೊದಲು ಮಾಡಬೇಕಾದ ಕೆಲಸಗಳಿಗೆ ವೇಗ ಬರುವುದು ಸಾಂತತ್ವದಿಂದಾಗಿ.

ಕೇಪಿನ ಕೋವಿಯೊಂದಿಗೆ ಮುಳ್ಳುಹಂದಿಯ ಬೇಟೆಗೆ ಹೋದ ಸಾಂತ ಮುದಿಹುಲಿಯನ್ನು ಎದುರಿಸಬೇಕಾಯಿತು. ಎಲೆಯಡಿಕೆ ಚೀಲದಲ್ಲಿದ್ದ ಹೊಗೆಸೊಪ್ಪಿನಿಂದಾಗಿ ಸಾಂತ ಬದುಕಿಕೊಂಡ ಘಟನೆ ಸ್ವಾರಸ್ಯಪೂರ್ಣವಾಗಿದೆ. ಕೋಣನಿಂದಾಗಿ ಸಾಂತಪ್ಪ ನಗ್ನನಾದದ್ದು, ಸೇಸ ಮತ್ತು ಸಾಂತನ ನಡುವೆ ವ್ಯಾಜ್ಯವಿದ್ದರೂ ಎಲೆಯಡಿಕೆ ಹಂಚಿಕೊಂಡು ವಾದವನ್ನು ಮುಂದುವರಿಸಿದ್ದು - ಇವೆಲ್ಲ ಮನುಷ್ಯನ ನಿಷ್ಕಪಟ ನಡವಳಿಕೆಗಳಿಗೆ ಸಾಕ್ಷಿಯಾಗಿ ಕವಿತೆಗಳಲ್ಲಿ ಕಾಣಸಿಗುತ್ತವೆ. ನರಿಯ ಬಾಯಿಯಿಂದ ಹುಂಜ ತಪ್ಪಿಸಿಕೊಂಡು ಬಂದು ಆರೈಕೆ ಪಡೆದು ಮತ್ತೆ ಹೀರೋ ಆಗಿ ಯಾರಿಗೂ ಬಗ್ಗದೆ ಬದುಕಿದುದನ್ನು ಕುದ್ಕ ಹೊತ್ತ ಕೋಳಿ ಕವಿತೆಯಲ್ಲಿ ಕಾಣುತ್ತೇವೆ.

ಹೂಂಜ ಹೋದ ದಾರಿತುಂಬ
ಹೇಂಟೆಗೆಲ್ಲ ಮೊಟ್ಟೆಹಾಕಿ
ಕೂಂಟೆಗೆಲಿ ಪಿಳ್ಳೆಗಳ್ದ್ ತಾಳಮದ್ದಲೆ

ತಾಳಮದ್ದಲೆ ಎಂಬ ಒಂದು ಶಬ್ದವೇ ಒಂದು ದೃಶ್ಯವನ್ನು ರಚಿಸುವಷ್ಟು ಸಮರ್ಥವಾಗಿದೆ. ಹೆಮ್ಮೆಯಿಂದ ದನಿಯೆತ್ತಿ ಕೂಗುವ ಹುಂಜ ಭಾಗವತನಾದರೆ, ಸಣ್ಣ ಸಣ್ಣ ದನಿಯಲ್ಲಿ ಶಬ್ದ ಹೊರಡಿಸಿ ಅನುಸರಿಸುವ ಹೆಣ್ಣುಕೋಳಿ ಮದ್ದಲೆ ಬಾರಿಸುತ್ತದೆ. ಗೂಡಿನಲ್ಲಿರುವ ಕೋಳಿ ಮರಿಗಳ ಕೂಗು ಅರ್ಥದಾರಿಗಳನ್ನು ನೆನಪಿಸುತ್ತದೆ. ನಾವು ಬದುಕಿರುವ ಪರಿಸರ, ಸನ್ನಿವೇಶಗಳು ನಮ್ಮಿಂದ ಕವಿತೆಯನ್ನು ಬರೆಸಿದರೆ ಹೀಗಿರುತ್ತದೆ. ಆದರೆ ಕವಿತೆಯ ಪ್ರಾರಂಭದ ಸಾಲುಗಳ ಲವಲವಿಕೆ ಕೊನೆಯಲ್ಲಿ ಸುಸ್ತಾದಂತಿದೆ. ಓದುಗನಿಗೊಂದು ಉಪದೇಶ ಮಾಡಬೇಕೆಂಬ ಪೂರ್ವನಿರ್ಧಾರವೇ ಇದಕ್ಕೆ ಕಾರಣವಾಗಿದೆ. ಕಾವ್ಯ ಕಾಣಿಸಬೇಕು, ಉಪದೇಶಿಸ ಬಾರದೆಂಬ ಅಭಿಪ್ರಾಯ ನನ್ನದು. ಬೆಳ್ಳನೆ ಬೆಳಗಾಗುವುದನ್ನು ಈ ಕವಿ ಚಿತ್ರಿಸಿರುವ ರೀತಿ ಅನನ್ಯವಾಗಿದೆ.

ಪಳ್ಳಂಗೆ ಬೊಳ್ಪಾತ್ ಬೆಳ್ಳರ ಮಾಣಿಕ
ದಾರಿ ಪೊಂಗರೆ ಮರಲಿ
ದೂರಂದಳೇ ಕಾಂಬ ಕೆಂಪು ಹೂವುನಾಂಗೆ
ಹೊತ್ತು ಬಾನದ ಕರೆಲಿ

ಸೂರ್ಯೋದಯದ ಸಮಯದಲ್ಲಿ ದಾರಿ ಬದಿಯ ಹೊಂಗಾರೆ ಮರದ ಮೇಲೆ ಬೆಳ್ಳರಮಾಣಿಕ ಹಕ್ಕಿಗಳು ಸಂಗೀತ ಕಛೇರಿ ನಡೆಸುತ್ತವೆ. ಹೊಂಗಾರೆ ಮರದ ಕೆಂಪು ಹೂವುಗಳ ಗೊಂಚಲು, ಬಾನಂಚಿನಲ್ಲಿ ಮೂಡುವ ಕೆಂಬಣ್ಣದ ಸೂರ್ಯ, ಹುಲ್ಲಿನ ಮೂಗಿನ ತುದಿಯಲ್ಲಿ ಹೊಳೆಯುವ ನತ್ತು ಇವೆಲ್ಲ ಉದಯಕಾಲದ ಸುಂದರ ಚಿತ್ರವನ್ನು ತೋರಿಸುತ್ತವೆ. ಅಡಿಕೆ ತೋಟದಲ್ಲಿ ಮರಕುಟಿಗ ಹಕ್ಕಿ ಹಳೇಮರಗಳನ್ನು ಪತ್ತೆಮಾಡಿ ಕೊಕ್ಕಿನಿಂದ ತೂತುಕೊರೆಯುವ ಕಟಕಟ ಶಬ್ದ ಕೇಳಿಸುತ್ತದೆ. ಉದಯದೊಂದಿಗೆ ಅಸ್ತದ ನೆನಪು ಕೊಡುವ ಕೆಲಸವನ್ನು ಮರಕುಟಿಗ ಮಾಡುತ್ತದೆ. ನಾವು ಬರುವಾಗ ಏನನ್ನೂ ತರಲಿಲ್ಲ, ಹೋಗುವಾಗ ಏನನ್ನೂ ಒಯ್ಯುವುದಿಲ್ಲ ಎಂಬ ಅನಗತ್ಯ ವಿವರಣೆಯೊಂದಿಗೆ ಕವಿತೆ ವಿರಮಿಸುತ್ತದೆ. ಅನಗತ್ಯ ಏಕೆಂದರೆ ಈ ವಿವೇಕವನ್ನು ಕೇಳಿಸಿಕೊಳ್ಳದವರು ಯಾರೂ ಇಲ್ಲ! ಗ್ರೀಸಿನ ಈಸೋಪನ ಕತೆಗಳಲ್ಲಿ ಪಶುಪಕ್ಷಿಗಳು ಮಾತಾಡುತ್ತಿದ್ದುದನ್ನು ನಾವು ಓದಿದ್ದೇವೆ. ಇಲ್ಲಿ ಮರಗಳು ಮಾತಾಡುವುದನ್ನು ಕಾಣುತ್ತೇವೆ. ಮಾವಿನ ಮರವು ಹಲಸಿನ ಮರವನ್ನು ನೋಡಿ ಮೇಣದ ಮುದ್ದೆ ಎಂದು ಹಂಗಿಸುತ್ತದೆ. ಹಲಸಿನ ಮರಕ್ಕೆ ಕಾಯುವಿಕೆಯ ಮಹತ್ವದ ಅರಿವಿದೆ. ಮಳೆಬಿದ್ದ ಮೇಲೆ ಚಿಗುರಿ ಸಿಹಿ ಹಣ್ಣುಗಳನ್ನು ಕೊಡುತ್ತದೆ. ಅಳಿಲು ಆಡುತ್ತದೆ, ಹಕ್ಕಿಗಳು ಹಾಡ ತೊಡಗುತ್ತವೆ. ಬದುಕಿನ ಏಳುಬೀಳು, ಅವಮಾನ, ಗೌರವಗಳತ್ತ ಮರಗಳು ಮುಖಮಾಡಿರುವುದನ್ನು ಕವಿತೆ ಗುರುತಿಸುತ್ತದೆ.

ಇಲ್ಲಿರುವ ಕವಿತೆಗಳೆಲ್ಲ ಕೃಷಿಕ್ಷೇತ್ರದಲ್ಲಿ ಹುಟ್ಟಿ ಚಿಗುರಿವೆ. ಗದ್ದೆ, ತೋಟ, ಬಾಳೆ, ಹಲಸು, ಮಾವು, ಕೋಣ, ಕೋವಿ ಇವಿಲ್ಲದೆ ಕೃಷಿಕನಿಲ್ಲ. ಹುಲಿ, ನರಿ, ಮುಂಗುಸಿಗಳೂ ರೈತನ ನೆರೆಕರೆಯವರೆ. ಕೇಂದ್ರದಲ್ಲಿರುವವನು ಸಾಂತ; ಮನುಷ್ಯ. ಇವನಾಡುವುದು ಅರೆಬಾಸೆ. ಈ ಭಾಷೆಯ ಪದಗಳಿಗೆ ತನ್ನದೇ ಆದ ಸಂಗೀತವಿದೆ. ಅದು ಅಕ್ಕರೆಯ ನಿಷ್ಕಪಟ ರಾಗ. ಹೇಂಗೊಳರಿ ಅಣ್ಣಾ? ಭೇಟಿಯಾದಾಗ ವಿಚಾರಿಸುವ ರೀತಿ ಇದು. ಇದರಲ್ಲಿ ಬಂಧುತ್ವದ ಧ್ವನಿ ಇದೆ. ಈ ಕಾರಣದಿಂದ ಇಲ್ಲಿರುವ ಕವಿತೆಗಳು ಆಪ್ತವಾಗುತ್ತವೆ.

ತಾ. 21-12-2018

ಕುತ್ಯಾಳ ನಾಗಪ್ಪ ಗೌಡ (ಕಿರಣ)
'ಕಿರಣ ಕುಟೀರ', ಸುಳ್ಯ - 574 234
ಮೊಬೈಲ್ : 9448297221 / 7618753221
kngkirana@gmail.com

ಸಂಕಲನಕ್ಕೆ ಮೊದಲು ನಿಸ್ಸಂಕೋಚದಿಂದ...

ಆತ್ಮೀಯ ಓದುಗರೆ, ಇದು ನನ್ನ ಎರಡನೆಯ ಅರೆಭಾಷೆ ಕವನ ಸಂಕಲನ. ಅರೆಭಾಷೆಯಲ್ಲಿ ಹೀಗೆ ಬರೆದರೆ ಚಂದವಿರಬಹುದೆಂದು ತೋರಿಸುವ ಬಯಕೆಯಿಂದ ನಾನು ಒಂದೆರಡು ಕವನ ಬರೆಯ ಹೊರಟದ್ದು ಇಲ್ಲಿಗೆ ಬಂದು ನಿಂತಿದೆ. ನನಗೆ ಕವನ ಸಂಕಲನ ಪ್ರಕಟಿಸುವ ಪೂರ್ವೇಚ್ಛೆಯೇನೂ ಇರಲಿಲ್ಲ. ಆದರೆ ಕಾಲೇಜು ದಿನಗಳಲ್ಲಿ ಬರೆಯುವ ಹವ್ಯಾಸ ಇದ್ದುದಕ್ಕೆ ನನ್ನ ಗುರುಗಳಾದ ಶ್ರೀ ಪುರುಷೋತ್ತಮ ಬಿಳಿಮಲೆಯವರು ಪ್ರೋತ್ಸಾಹನುಡಿಯ ನೀರೆರೆದವರು. ಈಗ ಮೊನ್ನೆ ಎರಡನೆಯ ಸಂಕಲನ ಸುದ್ದಿಕೇಳಿ ಸಂತೋಷ ವ್ಯಕ್ತಪಡಿಸುತ್ತಾ, ನನ್ನ ಬರಹದ ಕುರಿತು ಆಡಿದ ಮೆಚ್ಚುಗೆಯ ಮಾತು ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ಗುರುಗಳಾದ ಶ್ರೀ ಪ್ರಭಾಕರ ಶಿಶಿಲರು ಆ ದಿನಗಳಲ್ಲಿ ಭಿತ್ತಿಪತ್ರಿಕೆಯ ಮೂಲಕ ಬರೆಹಕ್ಕೆ ಪ್ರೇರಿಸುತ್ತಿದ್ದರು. ಅವರು ನಮ್ಮಲ್ಲಿ ಹಚ್ಚಿದ ವೈಚಾರಿಕತೆಯ ಕಿಡಿಯೇ ನನ್ನ ಕವಿತೆಗಳಲ್ಲಿನ ಚಿಂತನಾ ಶೈಲಿ. ಮದ್ರಾಸಿನಲ್ಲಿ ನನ್ನ ಗುರುಗಳಾದ ಪ್ರೊ. ಕೋಡಿ ಕುಶಾಲಪ್ಪ ಗೌಡರೊಮ್ಮೆ ನನ್ನದೊಂದು ಕನ್ನಡ ಕವನವನ್ನು ಓದಿ, ನೀನು ಮುಂದೆ ಇಂಥವನ್ನು ತುಂಬ ಬರೆಯಬೇಕೆಂದು ಹೇಳಿದ್ದರು. ಅವರಾಡಿದ ಮಾತು ನಿಜವಾಗುತ್ತಿರುವುದು ಮಾತ್ರ ಬರೋಬ್ಬರಿ 25 ವರ್ಷಗಳ ಅನಂತರ. ಅದೂ ಕನ್ನಡದಲ್ಲಲ್ಲ. ಅದರ ಉಪಭಾಷೆಯಾದ ಅರೆಭಾಷೆಯಲ್ಲಿ. ನನ್ನ ಮೊದಲ ಅರೆಭಾಷೆ ಕವನ ಸಂಕಲನವನ್ನು ನನ್ನ ಮನೆಯಲ್ಲಿ ಬಿಡುಗಡೆಮಾಡುತ್ತ ಅವರು ಹೇಳಿದ್ದ ಮೆಚ್ಚುಗೆಯ ಮಾತುಗಳು ನನ್ನನ್ನು ಸದಾ ಪ್ರೇರಿಸುತ್ತವೆ. ಇವರೆಲ್ಲರ ಜೊತೆಗೆ, ನನ್ನ ಸಾಹಿತ್ಯ ಚಟುವಟಿಕೆಗಳನ್ನು ಕುತೂಹಲದಿಂದ ಗಮನಿಸುವ ನನ್ನ ಗುರುಗಳಾದ ಪ್ರೊ. ರಾಮಸ್ವಾಮಿ ಚೆಲ್ಲಪ್ಪ ಗೌಂಡರ್ ಅವರನ್ನೂ ಈ ಸಂದರ್ಭದಲ್ಲಿ ಗೌರವದಿಂದ ನೆನೆಯುತ್ತೇನೆ.

ಇಂದಿನದು ಕೇವಲ ಅರ್ಹತೆಗೆ ಬೆಲೆಕೊಡುವ ಕಾಲ ಅಲ್ಲ ಎಂಬುದು ನನ್ನ 25 ವರ್ಷಗಳ ವೃತ್ತಿಜೀವನದ ಮೇಲಿಂದ ನನಗೆ ಖಾತರಿಯಾಗಿರುವ ಸಂಗತಿ. ಸಾಮಾಜಿಕವಾಗಿ ಒಬ್ಬನಿಗೆ ಹುಟ್ಟಿನಿಂದ ಬಂದ ಪ್ರತಿಭೆ, ರೂಢಿಸಿಕೊಂಡ ವಿದ್ಯೆಗಳ ಜೊತೆಗೆ ಸಾಮಾಜಿಕವಾಗಿ ಪ್ರವರ್ಧಮಾನಕ್ಕೆ ಬರಲು ಇನ್ನೂ ಅನೇಕ ವ್ಯಾವಹಾರಿಕ ಸಂಗತಿಗಳ ಅಗತ್ಯ ಇರಬೇಕಾಗುತ್ತದೆ ಎಂಬ ಕಾಲಧರ್ಮ ಎಲ್ಲರಿಗೂ ವೇದ್ಯವಾದದ್ದು,

ಬದುಕಿನಲ್ಲಿ ಇದೀಗ ನನ್ನ ಅನುಭವಕ್ಕೂ ಬಂದಿದೆ. ಎಲ್ಲರಿಗಿಂತ ಹಿರಿತನವಿದ್ದಾಗಲೂ ವೃತ್ತಿಕ್ಷೇತ್ರದಲ್ಲಿ ಎಲ್ಲರಿಗಿಂತ ಕಿರಿಯನಾಗಿರಬೇಕಾದ ವ್ಯವಸ್ಥೆಯ ಅಪಸವ್ಯಕ್ಕೆ ನೊಂದು ನಿರುತ್ಸಾಹಗೊಂಡಾಗೆಲ್ಲ – ನೋಡು, ನೀನು ಬರೆಯಬೇಕು. ನೀನು ಬರೆದುದನ್ನು ನಿನ್ನ ವಿದ್ಯಾರ್ಥಿಗಳು ಓದಬೇಕು; ಮಾತ್ರವಲ್ಲ, ಅದನ್ನು ಉಳಿದವರು ಪಾಠ ಮಾಡುವಂತಾಗಬೇಕು – ಎಂದು ಹುರಿದುಂಬಿಸಿದ ನನ್ನ ಶ್ರೀಮತಿಯ ಮಾತು ಬಹಳ ಬೆಲೆಯುಳ್ಳದ್ದು. ಆಕೆ ಹಾಗೆಯೇ, ಸ್ವಾಭಿಮಾನದ ಮೂರ್ತಿ. ಅದಕ್ಕಾಗಿ ನಾನು ಅವಳಿಗೆ ಕೃತಜ್ಞತೆ ಹೇಳಲೇಬೇಕು. ನಾನು ಕನಸಲ್ಲೂ ಊಹಿಸದ್ದನ್ನು ಅದು ಹೇಗೆ ಆಕೆ ಊಹಿಸಿದಳೋ – ಈಗಲೂ ನನಗೆ ಅಚ್ಚರಿಯ ಸಂಗತಿ. ಮೊನ್ನೆ ಮೊನ್ನೆ ನನ್ನ ಕವಿತೆಯೊಂದು ಪದವಿ ತರಗತಿಯ ಪಠ್ಯದಲ್ಲಿ ಸೇರ್ಪಡೆಯಾದ ಸುದ್ದಿ ನನಗೆಷ್ಟು ಸಂತಸ ನೀಡಿತೋ ಅದಕ್ಕಿಂತಲೂ ಹೆಚ್ಚಾಗಿ ಅವಳಾಡಿದ ಮಾತು ನಿಜವಾದ ಪರಿಗೆ ನಾನು ಅಚ್ಚರಿಪಟ್ಟೆ. ಜೀವನ ಸುಂದರ ಅಂತನಿಸುವುದೇ ಇಂಥ ಅನಿರೀಕ್ಷಿತವಾದ ಸಣ್ಣ ಸಣ್ಣ ಸಂತೋಷಗಳಿಂದ ಎಂಬುದು ನನ್ನ ನಂಬಿಕೆ.

ಪ್ರಕಟಣೆಯ ಆರ್ಥಿಕ ಹೊರೆಯ ಕಾರಣಕ್ಕೆ, ನಾನು ನನ್ನ ಕೆಲವು ಕವನಗಳನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿದೆ. ನನಗೆ ಆಶ್ಚರ್ಯ ಹುಟ್ಟಿಸಿದ ಸಂಗತಿಯೆಂದರೆ, ಈ ನನ್ನ ಕವಿತೆಗಳನ್ನು ಓದಿದವರು ಅರೆಭಾಷೆಯನ್ನು ಮಾತೃಭಾಷೆಯಾಗಿ ಆಡುವವರಿಗಿಂತ ಹೆಚ್ಚಾಗಿ ಅನ್ಯಭಾಷೆಯನ್ನಾಡುವವರು ಅವರು ಈ ಕವಿತೆಗಳನ್ನು ಮೆಚ್ಚಿಕೊಂಡದ್ದು ಮಾತ್ರವಲ್ಲ, ಕಷ್ಟಪಟ್ಟಾದರೂ ಅರೆಭಾಷೆಯ ಶಬ್ದಗಳನ್ನು ಬಳಸಿ ಅದೇ ಭಾಷೆಯಲ್ಲಿ ಉತ್ತರಿಸಲು ಯತ್ನಿಸಿದ್ದು ಖುಷಿಕೊಟ್ಟಿತು. ಆತ್ಮೀಯ ಶ್ರೀ ರಾಮಪ್ರಸಾದ ಕಾಂಚೋಡು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ – ಅಯ್ಯೋಂತೇಳ್‌ದೆ ಬಾಳೆ – ಎಂಬ ಈ ಸಂಕಲನದ ಕವಿತೆಯನ್ನು ರಾಗ ಸಂಯೋಜಿಸಿ ಹಾಡಿಯೇ ತೋರಿಸಿದರು. ಉಳಿದಂತೆ ನೂರಕ್ಕೂ ಹೆಚ್ಚು ಜನ ಅಲ್ಲಿ ಅಂಟಿಸಿದ ಕೆಲವು ಕವಿತೆಗಳನ್ನು ಓದಿ ಆನಂದಿಸಿದ್ದು ಮಾತ್ರವಲ್ಲ, ಪ್ರತಿಕ್ರಿಯಿಸಿ ನನ್ನ ಸಂತೋಷವನ್ನು ಇಮ್ಮಡಿಸಿದ್ದಾರೆ, ನನ್ನ ಆತ್ಮವಿಶ್ವಾಸವನ್ನೂ ಇಮ್ಮಡಿಸಿದ್ದಾರೆ.

ಹಳಗನ್ನಡ ಕವಿಯೊಬ್ಬ – ಕಾವ್ಯ ಬರೆದಾಗ ಅದನ್ನೋದಿ ಸಂತೋಷಪಡುವ ಓದುಗರಿಲ್ಲದ ಬಗ್ಗೆ ಹೇಳುತ್ತಾ, ಕಟ್ಟಿಯುಮೇನೋ ಮಾಲೆಗಾರನ ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೆ? (ಬಾಸಿಗ = ಹೂಮಾಲೆ) ಎಂದು

ಆತಂಕ ವ್ಯಕ್ತಪಡಿಸಿದ್ದು ಕನ್ನಡ ಸಾಹಿತ್ಯಲೋಕದಲ್ಲಿ ಬಲು ಪ್ರಸಿದ್ಧ ಉದಾಹರಣೆ. ಆ ಮಹಾಕವಿಯ ಕಾಲದಲ್ಲಿ ಫೇಸ್‌ಬುಕ್ ಇದ್ದಿದ್ದರೆ ಇಂಥದೊಂದು ಹೇಳಿಕೆಯೇ ಬರಲವಕಾಶ ಇರುತ್ತಿರಲಿಲ್ಲ ಎಂದು ನನ್ನಷ್ಟಕ್ಕೆ ನಾನೇ ಹಗುರವಾಗಿ ಯೋಚಿಸಿದ್ದುಂಟು. ಯಾಕೆಂದರೆ ನನ್ನ ಸುತ್ತ ಉದಾರವಾಗಿ ಪುಸ್ತಕ ಕೊಟ್ಟರೂ ಓದುವ ಆಸಕ್ತಿಯಿರುವವರ ಸಂಖ್ಯೆ ದೊಡ್ಡದೇನೂ ಅಲ್ಲ. ಇಂಥ ಹೊತ್ತಿನಲ್ಲಿ ಅಷ್ಟೊಂದು ಜನ ಆಸಕ್ತ ಓದುಗರು ನಯಾಪೈಸೆ ಖರ್ಚಿಲ್ಲದೆ ಕೂತಲ್ಲೇ ಈ ಮಾಧ್ಯಮದಲ್ಲಿ ಲಭ್ಯವಾಗುವುದೆಂದರೆ ಅದೇನೂ ಸಣ್ಣ ವಿಚಾರ ಅಲ್ಲ. ಸನ್ಮಾನ್ಯರಾದ ಆ ಎಲ್ಲ ಸಾಹಿತ್ಯಾಸಕ್ತರನ್ನು ಗೌರವದಿಂದ ಈ ಹೊತ್ತು ನೆನೆಯುತ್ತೇನೆ. ನನ್ನ ಮಾವಂದಿರಾದ ಹೊಸೂರು ಗೋಪಾಲ ಗೌಡರು, ಕಲಾವಿದರೂ ಆಗಿರುವ ಶ್ರೀ ಮೋಹನ ಸೋನ ಅವರು ಒಮ್ಮೆ ಮಾತಾಡುತ್ತಾ, ನಿನ್ನ ಕವನ ಸಂಕಲನವನ್ನು ಬೇಸರ ಕಳೆಯಲು ಮತ್ತೆ ಮತ್ತೆ ಓದುತ್ತಿರುತ್ತೇವೆ ಎಂದ ಮಾತು ನನಗೊಂದು ಸ್ಫೂರ್ತಿ ಕೊಟ್ಟದ್ದು ಸುಳ್ಳಲ್ಲ. ನನ್ನ ಹಳ್ಳಿಯ ಮತ್ತು ಅದರ ಸುತ್ತಮುತ್ತಿನ ಇಂಥ ಓದುಗರಿಗಾಗಿಯಾದರೂ ನಾನು ಬರೆಯಬೇಕು ಎಂದೆನಿಸಿದ್ದು ನನ್ನ ಮಟ್ಟಿಗಿನ ನಿಜ ಎಂಬುದನ್ನು ಇಲ್ಲಿ ದಾಖಲಿಸುವುದು ಅಗತ್ಯ ಎಂದು ಭಾವಿಸುತ್ತೇನೆ. ಮಾಲೆಗಾರ ಮಾಲೆಯನ್ನು ಶ್ರಮಪೂರ್ವಕ ಕಟ್ಟಿದರೆ ಮುಡಿವ ಭೋಗಿಗಳಿಗೆ ಕೊರತೆಯಿಲ್ಲ ಎಂಬುದು ಖಂಡಿತ ಆತ್ಮಸ್ತುತಿಯಲ್ಲ, ಬದಲಾಗಿ ಆತ್ಮವಿಶ್ವಾಸದ ಮಾತು; ಎಲ್ಲರೂ ಯೋಚಿಸಬೇಕಾದ ಮಾತೂ ಹೌದು. ಗೆಳೆಯರಾದ ಸಾಮಾಜಿಕ ಕಾರ್ಯಕರ್ತ ಶ್ರೀ ಗೋಪಾಲ ಪೆರಾಜೆ, ಪ್ರಾಧ್ಯಾಪಕ ಶ್ರೀ ವಿಶ್ವನಾಥ ಬದಿಕಾನರು ನೀಡಿದ ಪ್ರೋತ್ಸಾಹಕ್ಕೆ ಕೃತಜ್ಞತೆಗಳು ಮಾತ್ರ ಸಾಲವು ಎಂಬುದು ಗೊತ್ತಿದೆ. ಒಳ್ಳೆಯ ಗೆಳೆಯರನ್ನು ಪಡೆಯುವುದೂ, ಒಳ್ಳೆಯ ಸಂಸಾರವನ್ನು ಪಡೆಯುವುದೂ ಬದುಕಿನ ಭಾಗ್ಯಗಳಲ್ಲಿ ಒಂದು ಎಂಬುದು ನನ್ನ ಗಟ್ಟಿ ನಂಬಿಕೆ. ಇವರೆಲ್ಲರಿಗೂ ನನ್ನ ಪ್ರೀತಿಯ ವಂದನೆಗಳು ಸಲ್ಲುತ್ತವೆ. ನನ್ನ ಸಾಹಿತ್ಯಿಕ ಚಟುವಟಿಕೆಗಳಿಗೆ ಸ್ಫೂರ್ತಿಯಾಗಿ ನಿಂತ ಪ್ರೀತಿಯ ಪತ್ನಿ ಶ್ರೀಮತಿ ರೋಹಿಣಿ ಮತ್ತು ಮಕ್ಕಳಿಗೆ, ತಮ್ಮ ಶ್ರೀನಿವಾಸ ನಿಡಿಂಜಿ ಮತ್ತು ಮನೆಯವರಿಗೆ, ಅತ್ತೆ ಶ್ರೀಮತಿ ದುರ್ಗಾದೇವಿ ಕೆ. ಇವರೆಲ್ಲರಿಗೂ ನಾನು ಋಣಿ. ಇದರೊಂದಿಗೆ, ನನ್ನ ಮೇಲೆ ಅಭಿಮಾನವಿರಿಸಿಕೊಂಡ ನನ್ನ ಕುಟುಂಬದ ಹಿರಿಯರನ್ನು, ಕಿರಿಯರನ್ನು, ನನ್ನ ಊರವರನ್ನು ಈ ಸಂದರ್ಭದಲ್ಲಿ ಪ್ರೀತಿಯಿಂದ ಸ್ಮರಿಸಿಕೊಳ್ಳುತ್ತೇನೆ. ಅವರೆಲ್ಲರಿಗೆ ಪ್ರೀತಿಪೂರ್ವಕ ವಂದನೆಗಳು.

ಇತ್ತೀಚಿನವರೆಗೂ ಈ ಭಾಷೆಯಲ್ಲಿ ಬರೆಯುವುದು, ಓದುವುದು ಹೋಗಲಿ, ಕನ್ನಡವನ್ನಾಡುವಲ್ಲಿ ಇದನ್ನು ಗೌರವದಿಂದ ಆಡುವುದೂ ಸುಲಭವಾಗಿರಲಿಲ್ಲ. ಇದನ್ನೆಲ್ಲ ಸಾಧ್ಯವಾಗಿಸಿದ ಅನೇಕ ಸಂಗತಿಗಳಲ್ಲಿ ಪ್ರಮುಖವಾದದ್ದು ಮಡಿಕೇರಿ ಆಕಾಶವಾಣಿಯ ಅರೆಭಾಷೆ ಕಾರ್ಯಕ್ರಮ ಹಾಗೂ ಮಾನ್ಯ ಕೇಂದ್ರ ಸಚಿವರಾದ ಶ್ರೀ ಸದಾನಂದ ಗೌಡರಿಂದ ಮೂರ್ತರೂಪಕ್ಕೆ ಬಂದ ಅರೆಭಾಷಾ ಅಕಾಡೆಮಿ. ಇಂದು ಕಾಲೇಜು ವಾರ್ಷಿಕ ಸಂಚಿಕೆಯಲ್ಲೂ ಅರೆಭಾಷೆಯ ಬರಹಗಳು ಪ್ರಕಟವಾಗುವುದು ಒಂದು ಕಾಲದಲ್ಲಿ ಊಹೆಗೂ ನಿಲುಕದ ಸಂಗತಿಯಾಗಿತ್ತು. ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಪಠ್ಯಪುಸ್ತಕಗಳಲ್ಲಿ ಪ್ರೊ. ಶಿವರಾಮ ಶೆಟ್ಟರ ಪ್ರಯೋಗಶೀಲ ಮನಸ್ಸಿನ ಪರಿಣಾಮವಾಗಿ ಇಂದು ತುಳು, ಕೊಂಕಣಿ, ಬ್ಯಾರಿ, ಕೊಡವ ಹಾಗೂ ಅರೆಭಾಷೆಯ ಬರಹಗಳು ಸ್ಥಾನ ಪಡೆದಿರುವುದು ಕೇವಲ ಒಂದು ಪ್ರಯೋಗವೆಂದು ಮರೆಯುವಷ್ಟು ಸರಳ ಸಂಗತಿ ಅಲ್ಲ. ಹೊರದೇಶದ ಅಧ್ಯಯನ ಮಾದರಿಗಳೇ ಆದರ್ಶ ಎಂಬಂತಿದ್ದ ವಾತಾವರಣದಲ್ಲಿ ಇದೆಲ್ಲ ಅವರಿಗಿಂತ ಹಿಂದಿನ ಹಳೆಯ ತಲೆಮಾರಿನ ಕನ್ನಡ ಮೇಷ್ಟರುಗಳಿಗೆ ಯೋಚಿಸಲೂ ಸಾಧ್ಯವಾಗಿರದ ಸಂಗತಿಯಾಗಿತ್ತು. ಪ್ರೊ. ರಾಮಸ್ವಾಮಿಯವರು ಹೇಳಿದ್ದ – ಒಂದು ಕಾಲದಲ್ಲಿ ಸಂಸ್ಕೃತದೆದುರು ಕನ್ನಡ ಹೇಗಿತ್ತೋ, ಬಳಿಕ ಇಂಗ್ಲಿಷ್‌ನ ಎದುರು ಕನ್ನಡ ಹೇಗಿತ್ತೋ, ಹಾಗೇ ಕನ್ನಡದೆದುರು ಪ್ರಾದೇಶಿಕ ಭಾಷೆಗಳ ಸ್ಥಿತಿ ಇದೆ – ಎಂಬ ಮಾತು ಇಂದಿಗೂ ಸುಳ್ಳಲ್ಲ. ಪಠ್ಯಕ್ಕೆ ಸಂಬಂಧಿಸಿದಂತೆ ಇದು ಇನ್ನೂ ಕಟುವಾಸ್ತವ. ಪ್ರೊ. ಶೆಟ್ಟರ ಈ ಹೊಸ ಪ್ರಯೋಗದಿಂದಾಗಿ ಪ್ರಾದೇಶಿಕ ಭಾಷೆಗಳ ಭಾಷಾ ಸೌಂದರ್ಯವೇನು ಎಂಬುದು ಎಲ್ಲರಿಗೂ ತಿಳಿಯುವಂತಾಗಿದೆ. ಇದಕ್ಕಿಂತ ಹೆಚ್ಚಾಗಿ ಆಯಾ ಭಾಷೆಗಳನ್ನಾಡುವ ವಿದ್ಯಾರ್ಥಿಗಳಲ್ಲಿ ತಮ್ಮ ಮಾತೃಭಾಷೆಯು ಪಠ್ಯದಲ್ಲಿ ಬರುತ್ತಿರುವುದು ಒಂದು ವಿಧದ ಆತ್ಮವಿಶ್ವಾಸವನ್ನು ತುಂಬುತ್ತಿದೆ. ತಮ್ಮ ಭಾಷೆಯ ಕುರಿತಂತೆ ಅವರಿಗೇ ಇದ್ದ ಕೀಳರಿಮೆ ಮರೆಯಾಗುತ್ತಿದೆ. ಹೀಗಾಗಿದೆ ಎಂಬುದಕ್ಕೆ – ಅವರವರ ಮಾತೃಭಾಷೆಗಳಲ್ಲಿ ಹೊಸ ತಲೆಮಾರಿನ ವಿದ್ಯಾರ್ಥಿಗಳು ಬರೆಯುವುದರಲ್ಲಿ ಆದ ಹೆಚ್ಚಳವೇ ಸಾಕ್ಷಿ. ಪ್ರಾದೇಶಿಕ ಭಾಷೆಗಳಿಗೆ ಪರಿಚ್ಛೇದದಲ್ಲಿ ಸ್ಥಾನ ಕೊಡಿಸುವ ಸಾಂಸ್ಕೃತಿಕ ಆಯಾಮದ ರಾಜಕೀಯ ಪ್ರಯತ್ನದ ಜೊತೆಗೇ ಇಂತಹ ಪ್ರಾದೇಶಿಕ ಭಾಷೆಗಳಿಗೆ ಪ್ರಾಮುಖ್ಯತೆ ನೀಡುವ ಕೆಲಸ ಇಂದಿನ ಅಗತ್ಯವೂ ಹೌದು. ಇದರಿಂದಾಗಿ ಆಯಾ ಭಾಷೆಗಳನ್ನಾಡುವ ಜನಕ್ಕೆ, ಅವರ ಭಾಷೆಯೂ

ಗಂಭೀರ ಸಂವಹನಕ್ಕೆ ಅರ್ಹತೆಯಿರುವಂಥಾದ್ದು ಎಂಬ ಸಾಧ್ಯತೆಯೊಂದನ್ನು ತೋರಿಸಿದಂತಾಗಿದೆ. ಇಂಥ ಕ್ರಮವು ಒಂದು ಸಮುದಾಯಕ್ಕೆ ಆತ್ಮವಿಶ್ವಾಸವನ್ನು ತುಂಬುವುದರ ಜೊತೆಗೆ ಅವರೂ ಎಲ್ಲರಂತೆ ಪ್ರಮುಖರೇ ಎಂಬ ಅರಿವನ್ನು ಮೂಡಿಸುವುದು ಮಾತ್ರವಲ್ಲ, ನಿಜವಾದ ದೇಶ ಕಟ್ಟುವ ಕೆಲಸವೆಂಬುದನ್ನು ದೂರದೃಷ್ಟಿ ಇರುವ ಯಾರಾದರೂ ಒಪ್ಪಲೇಬೇಕಾದ ಸಂಗತಿ. ಇಂಗ್ಲಿಷ್ ಮೂಲದ್ದೇ ಶ್ರೇಷ್ಠವೆಂಬ ಹುಸಿಕೋಟೆ ಬಿರುಕು ಬಿಟ್ಟಾಗಲೇ ನಿಜವಾದ ದೇಶೀಯ ವಾದರಿಗಳು ರೂಪುಗೊಳ್ಳಲು ವೇದಿಕೆ ಸಿದ್ಧವಾಗುವುದು. ಈ ಕವನ ಸಂಕಲನ ಪ್ರಕಟಣೆಯ ಹೊತ್ತಿನಲ್ಲಿ ಇಂಥ ಪ್ರಯತ್ನದಲ್ಲಿ ತೊಡಗಿಸಿಕೊಂಡಿರುವ ಆತ್ಮೀಯ ಶಿವರಾಮ ಶೆಟ್ಟರನ್ನು ಹಾಗೂ ಅಂಥ ಮನಃಸ್ಥಿತಿಯ, ಸಂಬಂಧಿಸಿದ ಎಲ್ಲರನ್ನು ಪ್ರೀತಿಯಿಂದ ಸ್ಮರಿಸಿಕೊಳ್ಳುತ್ತೇನೆ.

ಅರೆಭಾಷೆಯಲ್ಲಿ ಪುಸ್ತಕಗಳ ಸಂಖ್ಯೆಯನ್ನಲ್ಲ, ಬದಲಾಗಿ ಓದುಗರನ್ನು ಸೃಷ್ಟಿ ಮಾಡಬೇಕಾದ್ದು ಈ ಹೊತ್ತಿನ ತುರ್ತು ಎಂಬುದು ನನ್ನ ನಿಲುವು. ಈ ಹಿನ್ನೆಲೆಯಲ್ಲಿ (ಸಾಮಾನ್ಯಾರ್ಥದಲ್ಲಿ) ಮನಸ್ಸಿಗೆ ಸಂತೋಷ ಕೊಡಬಲ್ಲದ್ದನ್ನು ಮಾತ್ರ ಓದುಗ ಓದಬಯಸುತ್ತಾನೆ. ಅಂದರೆ, ನಗು, ಬೌದ್ಧಿಕತೆ, ತತ್ವಚಿಂತನೆ, ಗೇಯತೆ ಹೀಗೆ ಪಾಕಗೊಂಡ ಕಾವ್ಯ ಜನರನ್ನು ತಲುಪುವುದು ಮಾತ್ರವಲ್ಲ ಅವರಲ್ಲಿ ಬಹುಕಾಲ ನೆನಪಾಗಿ ಉಳಿಯುತ್ತದೆ ಎಂಬುದು ನನ್ನ ಭಾವನೆ. ಹಾಗಾಗಿ ಈ ಸಂಕಲನದಲ್ಲಿನ ರಚನೆಗಳಲ್ಲಿ ಇಂಥ ಪಾಕಕ್ಕೆ ಪ್ರಯತ್ನಿಸಿದ್ದೇನೆ. ಸಾಹಿತ್ಯಾಸಕ್ತರು ಈ ಸಂಕಲನವನ್ನೂ ಹಿಂದಿನಂತೆಯೇ ಪ್ರೀತಿಯಿಂದ ಸ್ವೀಕರಿಸುತ್ತಾರೆ ಎಂಬ ನಂಬಿಕೆ ನನ್ನದು. ಈ ಸಂಕಲನದ ಒಂದು ಸ್ಥಾಯೀ ಪಾತ್ರವಾದ ಸಾಂತಪ್ಪ ಹೀಗೇ ಸುಮ್ಮನೆ ಸೃಷ್ಟಿಯಾದವ. ಮೊದಲ ಸಂಕಲನದಲ್ಲಿ ಇವನ ಬಗೆಗಿನ ಕವನವೊಂದು (ಸಾಂತಪ್ಪಣ್ಣ ಸರಾಯ ಕುಡ್ದ್) ಮಕ್ಕಳಿಂದ ಮುದುಕರವರೆಗೆ ಮೆಚ್ಚುಗೆ ಗಳಿಸಿದಾಗ ಅವನಿಗೊಂದು ಸ್ವರೂಪ ಸಿದ್ಧವಾಯಿತು. ಇಲ್ಲಿ ಅವನ ಹಾಗೂ ಅವನ ಹೆಂಡತಿ ಸೀತಮ್ಮ ಮತ್ತು ತಾಯಿ ಕೇಪಜ್ಜಿಯ ಮೂಲಕ ಪ್ರಾದೇಶಿಕ ಶ್ರೀಸಾಮಾನ್ಯನ ಬದುಕಿನ ಕೆಲವೇ ಮಗ್ಗುಲುಗಳನ್ನು ಪರಿಚಯಿಸಲು ಯತ್ನಿಸಿದ್ದೇನೆ.

ಕವನ ಸಂಕಲನ ಮುದ್ರಣ ಕಾರ್ಯವನ್ನು ಅದಕ್ಕೂ ಮೀರಿದ ಕಾಳಜಿ ಹಾಗೂ ಆತ್ಮೀಯತೆಯಿಂದ ಮಾಡಿದವರು ಹಿರಿಯರಾದ ಪುತ್ತೂರಿನ ಶ್ರೀ ಎಂ. ಎಸ್. ರಘುನಾಥ ರಾಯರು. ಪ್ರಸಿದ್ಧ ರಾಜೇಶ್ ಪ್ರೆಸ್‌ನ ಮ್ಹಾಲಕರು ಅವರು. ಅವರಿಗೂ, ಅವರ ನುರಿತ ಸಹೋದ್ಯೋಗಿಗಳಿಗೂ ಆತ್ಮೀಯ ವಂದನೆಗಳು.

ಮುಖಪುಟವನ್ನು ಅತ್ಯಂತ ಕಲಾತ್ಮಕವಾಗಿ ವಿನ್ಯಾಸ ಮಾಡಿಕೊಟ್ಟವರು ಹಿರಿಯ ಕಲಾವಿದರಾದ ಶ್ರೀ ಮೋಹನ ಸೋನ ಅವರು. ಅವರಿಗೂ ಈ ಹೊತ್ತಿನಲ್ಲಿ ಗೌರವದಿಂದ ವಂದಿಸುತ್ತೇನೆ.

ಇಷ್ಟೆಲ್ಲವನ್ನು ನನ್ನ ಕವನ ಸಂಕಲನದ ಬಗ್ಗೆ ಹೇಳಿಕೊಂಡಿದ್ದೇನೆಂದರೆ ಇದೇನೂ ಪರಿಪೂರ್ಣ, ದೋಷಾತೀತ ಎಂದೇನಲ್ಲ. ಲೋಕದಲ್ಲಿ ಎರಡು ಸಂಗತಿಗಳು ನಮಗೆ ಕಾಣುವುದಿಲ್ಲವಂತೆ. ಒಂದು ನಮ್ಮ ಮುಖವಾದರೆ, ಇನ್ನೊಂದು ನಮ್ಮ ಬೆನ್ನು. ಇವೆರಡನ್ನೂ ಅನ್ಯರ ಮೂಲಕವೇ ನಾವು ನೋಡಬೇಕು. ಹಾಗಾಗಿ ಈ ಕವನ ಸಂಕಲನಕ್ಕೆ ಸಂಬಂಧಿಸಿದಂತೆ – ನನಗೆ ಕಾಣದ ನನ್ನ ಮುಖದ ಕುರಿತು, ನನಗೆ ಕಾಣದ ನನ್ನ ಬೆನ್ನಿನ ಕುರಿತು ಸಹೃದಯರು ಹೇಳುವ ಎಷ್ಟೇ ಸಣ್ಣ ಸಂಗತಿಯನ್ನಾದರೂ ಬಹು ಆಸ್ಥೆಯಿಂದ ಆಲಿಸಿ ತಿದ್ದಿಕೊಳ್ಳುತ್ತೇನೆ, ಅಳವಡಿಸಿಕೊಳ್ಳುತ್ತೇನೆ. ಸೃಜನಶೀಲ ಸಾಹಿತ್ಯ ಸೃಷ್ಟಿಯ ಹಿಂದೆ ಇರಬೇಕಾದ ತಾದಾತ್ಮ್ಯತೆ, ಲೋಕಾನುಭವಗಳ ಪ್ರಮಾಣ ನಿಜಕ್ಕೂ ಬಹು ದೊಡ್ಡದಿರಬೇಕು. ಅದೇ ಸೃಜನಶೀಲ ಸಾಹಿತ್ಯದ ಬೇರು, ನೀರು, ಗೊಬ್ಬರ. ಬದುಕಿನ ಜಂಜಾಟದಲ್ಲಿ ಅದನ್ನು ಗ್ರಹಿಸುವುದೇನೂ ಸುಲಭದ ಕೆಲಸ ಅಲ್ಲ. ಈ ಕಾರಣಕ್ಕಾಗಿಯೇ ಬೇರೆ ಬೇರೆ ಮಗ್ಗುಲುಗಳಲ್ಲಿ ಕೃತಿಯ ವಸ್ತು, ವಿವರಗಳಿಗೆ ಸಂಬಂಧಿಸಿದಂತೆ ಕೆಲ ಮಿತಿಗಳೂ ಉಂಟಾಗಿವೆ ಎಂಬ ಅರಿವಿದೆ. ಸಹೃದಯರು ಅವನ್ನು ಗ್ರಹಿಸಿ ಮನ್ನಿಸಬಹುದೆಂದು ಹಾರೈಸುತ್ತ ಈ ಕವನ ಸಂಕಲನವನ್ನು ನಿಮ್ಮ ಕೈಯಲ್ಲಿಡುತ್ತಿದ್ದೇನೆ.

ಇತಿ ವಂದನೆಗಳೊಂದಿಗೆ

ದಿನಾಂಕ : 25-2-2019

ಸ್ಥಳ : ಚೆಂಬು ಗ್ರಾಮ

ಡಾ. ಕರುಣಾಕರ ನಿಡಿಂಜಿ

ನಿಡಿಂಜಿ ಮನೆ, ಚೆಂಬು ಗ್ರಾಮ

ಅಂಚೆ : ಬಾಲಂಬಿ - 574 234

9880866398 mavumallige@gmail.com

ಒಳಗೆನ ಪುಟಗ

ನಗೆ ಬೇಕು

ನಗೆ ಬೇಕು ನಗೆ ಬೇಕು ಕೇದಗೆ ಗೊನೆ ಹಾಂಗೆ
ನಗೆ ಬೇಕು ಮಕ್ಕಳ ಹೂ ನಗೆನಾಂಗೇ
ಬಾರದ ಬಂಗ ಬಂದ್ ಸಿಕ್ಕಕಾದ್ದ್ ಸಿಗದೆ
ಬೊಚ್ಚಿ ಬಾಡುವ ಹೊತ್ತ್ ನಗೆ ಬೇಕು.

ಹಗ್‌ಲ್ ಸುಡುವ ಹೊತ್ತು ಬೊಳ್ಪಿಗೆ ಹಿಂಬೊತ್ತ್
ತಂಪು ಕೆಂಪಾಗಿ ದಾಟಿ ಹೋವಾಂಗೇ
ಎಲ್ಲಿಂದಳೋ ಗುದ್ದಿ, ಎತ್ತಂದಳೋ ಕೊಯ್ದ್
ಕಾಸಿ ಬೇಸಿಕನನೂ ನಗೆ ಬೇಕು.

ಎಷ್ಟೇ ಸುತ್ತಿರು ಸುತ್ತಿ ಮುಚ್ಚಿ ಮುಚ್ಚಿಸಿರೂ
ಮಲ್ಲಿಗೆ ಗಮ ಸುತ್ತಿ ಸುಳಿವಾಂಗೇ
ಹಳ್ಳ ಹರ್‌ಪು ಕಟ್ಟಿ ಪಚ್ಚೆ ಕಾಡ್ ಬಾಡಿ
ಇಚ್ಚೆ ಇರದಿರಿಕನನೂ ನಗೆ ಬೇಕು.

ನಮ್ಮ ಕೈಲಿಲ್ಲದ್ದ್ ಇಚ್ಚೆನಾಂಗಾಗದ್ದ್
ಎಂತವಂಗೂ ಎಂದೂ ತಪ್ಪದೆ ಬಾದು
ಬಾಕನ ಹೋಕನ ನಡುಲಿ ಸಿಕ್ಕಿರಿಕನ
ಸಣ್ಣದಾದರು ಒಂದು ನಗೆ ಬೇಕು.



ಹಳಬರ ವ್ಯಾಜ್ಯ

ಸಾಂತಂಗು ಸೇಸಂಗು
ಅರೆಗಾಲ ನೀರಿಗೆ ಒಮ್ಮೆ ಜೆಗಳ ಬಾತ್
ಮತ್ತಾಕನ ನೆಂಪಾಗಿ ಪಿರಿಯಕನ
ಮರ್ತೇ ಹೋತಿತ್ತ್

ಇಬ್ಬರ ಮಕ್ಕಳು ಕೋರ್ಟಿಗೆ ಹೋದೊ
ಕೇಸ್ ನಡಿಯತಿತ್ತ್
ಪಟ್ಟೆದಾರರೇ ಯಾಗೊಳು ಕೋರ್ಟ್‌ಗೆ
ಹೋಗಿ ಬರಕಾಗಿತ್ತ್.

ವಾದ ಪ್ರತಿವಾದ
ಕೋರ್ಟ್‌ನ ಕಟ್ಟೆಲಿ ಜೋರು ನಡಿಯತಿತ್ತ್
ಮಾತ್‌ನ ನಡುಲಿ
ಸಾಂತಂಗೆ ಒಮ್ಮೆ ಎಲಡಿಕೆ ತಿನಕಾತ್

ಎಲ್ಲ ಇದ್ದ ಸಂಚಿ
ಸುಣ್ಣನೆ ಇತ್ತ್‌ಲೆ ಡಬ್ಬಿನೆ ಮರ್ತಿತ್ತ್
ಕಟ್ಟೆಂದ ಇಳ್ದಂವ
ಸೇಸನ ಹಕ್ಕಲೆ ಹೋಗಿ ಕೇಳಿ ತಾತ್

ಸಾಂತನ ಸೇಸನ
ಈ ವೆವಹಾರಕೆ ಲಾಯರ್ ಕಂಗಾಲ್
ಕೋರ್ಟ್‌ಲಿ ಜೆನಂಗ
ನೋಡಿ ನೆಗಾಡ್ಲೊ ಅಜ್ಜಂದರ ಪಾಲ್

ಎಲಡಿಕೆ ಮುಗ್‌ಸಿ ತಯಾರ್ ಸಾಂತ
ವಾದಕೆ ಸುರು ಮಾಡ್ತ್
ಯಾಕೆ ಹೀಂಗೆಂತ
ಕೇಳ್ದ ಜಡ್ಜಿಗೆ ಬೇರೆ ಕತೆನೆ ಹೇಳ್ತ್

ನೋಡಿ ಸಾಮಿ ಈ ನೀರ್ ತಂದೊವು
ನಾನು ನೀವು ಅಲ್ಲ
ಊರುಲಿ ಮೊಯಿಂಸರ್ ನೀರಿಗೆ ಉರುಡುದು
ಇಂದು ನಿನ್ನೆ ಅಲ್ಲ

ನೀರ್‌ನ ಜೆಗಳ ನೀರ್‌ಗೆ ಮಾತ್ರ
ಎಲ್ಲದಿಕೂ ಅಲ್ಲ
ಜೆಗಳನೆ ಇಲ್ಲದೆ ಬೊದ್ಕಿಕೆ ನಾವೇನ್
ಕಲ್ಲ್ ಮರ ಅಲ್ಲ

ನೀರಿದ್ದಷ್ಟ್ ದಿನ ಜೆಗಳೊನು ಇದ್ದದೆ
ಅದ್ ಒಂದು ಸಮ್ಮಂದ
ಜೆಗಳ ನಿತ್ತ ದಿನ ಮರಿದು ನಂಗವನ
ಸೇಸಪ್ಪ ಯಾರ್‌ಂತ

ಹಳಬರ ವ್ಯಾಜ್ಯ

ನೀರ್‌ನ ಜೆಗಳನೆ ಮರ್ತಂವ ಸೇಸ
ಓಲ್ಲಿತ್ ದೂರಂದ
ಸಾಂತನ ಮಾತ್‌ಗೆ
ಹೌದುಂತೇಳ್ತ್ ಸೇಸನು ಆಚೆಂದ

ಜೆನ ಕಚ್ಚಾಡಿರೆ
ತುಂಬುದು ಹೊಟ್ಟೆ ಕೋರ್ಟ್‌ಲಿ ಗ್ಯೆವವರ
ನೀವಲ್ಲ ನಿಮ್ಮಪ್ಪ ಬಂದರು ತೀರದ್
ಈ ನೀರ್‌ನ ಜೆಗಳ

ಕೋರ್ಟ್‌ಗೆ ಬೊಯ್ದ ತಪ್ಪಿಗೆ ಸಾಂತನ
ಏರೆಸ್ಟ್ ಮಾಡಿಕಿತ್ತ್
ಹೇಳಿಕೆ ಮುಂದೆನೆ
ಜಾಮೀನ್ ಕೊಟ್ಟ್‌ದ್ದ್ ಸೇಸ ಬುಡ್ಸಿಕಂಡತ್

ದಾರಿ ಉದ್ದಕು
ನೀರ್‌ನ ನ್ಯಾಯನೆ ಅವರ ಬಾಯಿಲಿತ್ತ್
ಇಬ್ಬೊರು ಒಟ್ಟಾಗಿ ಚೆಂಬೂರಿಗೆ ಹೋದು
ನೋಡಿಕೆ ಲಾಯ್ಕಿತ್ತ್.

ಹಳಬರ ವ್ಯಾಜ್ಯ

ಹೋದು ಬೆರೀ ಕೈಲಿ

ಪಳ್ಳಂಗೆ ಬೊಳ್ಪಾತ್ ಬೆಳ್ಳರ ಮಾಣಿಕ
ದಾರಿ ಪೊಂಗರೆ ಮರಲೀ
ದೂರಂದಳೇ ಕಾಂಬ ಕೆಂಪು ಹೂವುನಾಂಗೆ
ಹೊತ್ತು ಬಾನದ ಕರೆಲೀ

ಹುಲ್ಲುನ ಮೂಕುಲಿ ಬೆಳ್ಳಿನ ಕಿಡಿ ಬೊಟ್ಟು
ಮಿಣ್ಕಿದೆ ಸೆರೆ ಸೆರೆಲೀ
ಕೇಳೀ ಕೇಳದಾಂಗೆ ಸೂಗುಟ್ಟಿಕಂಡ್ ಹೋದೆ
ಚೋಡಿ ಕಾನದ ಕರೆಲೀ

ಕುಂಡತ ಮೊರ್ಬದೆ ಹಕ್ಕಿಗ ಪರ್‌ಂಚ್‌ವೆ
ತುಂಬಿ ಹೂವುನ ದೈಲೀ
ತಂತಿಕಂಬದ ಮೇಲೇ ಹಬ್ಬಿ ನಿತ್ತುಟು ಬೊಳ್ಳಿ
ಸೆರ್‌ಂಗ್‌ನಾಂಗೆ ಮೈಲೀ

ಕುಂಬು ಕಮ್ಮುನ ಮರ ಕೊಡ್ಪ ಕೊಡ್ಪಿದೆ ಅಲ್ಲಿ
ಒಟ್ಟೆ ನಮ್ಮ ತಲೆಲೀ
ಯಾರೊಬ್ಬನೂ ಎಂದೂ ಹೇಳದೆ ಇದ್ದರೂ
ಬೂಮಿ ಬಾನದ ನಡುಲೀ
ನಡ್‌ಕಂಡ್ ಹೋದೆ ನಾ ಇಲ್ಲದಿದ್ದರೂ ಇಲ್ಲಿ
ಯಾಕೆ ಗೊತ್ತುಂಟೊ ಹೇಳೀ

ಗಾಳಿ-ಗಮಲ್‌ನ ಹಾಂಗೆ, ನೀರ್-ಮೀನ್‌ನ ಹಾಂಗೆ
ಇಲ್ಲಿ ಬೊಧ್ಕಿ ಬಾಳೀ
ಎಷ್ಟೇ ರಾಸಿ ಹಾಕಿ ಎಂತಾ ಮಾಳಿಗೆ ಕಟ್ಟಿ
ಹೋದು ಬೆರೀ ಕೈಲೀ
ನಾವು ಹೋದು ಬೆರೀ ಕೈಲೀ.



ಕೇಪಜ್ಜಿನ ಮೊದ್ದ್

ಅಂದ್ ಸುಕ್ರಾರ ಹಬ್ಬಕೆ ಮನೆಗೆ
ನಂಟ್‌ರ ಹಿಂಡೇ ಹೊರ್ಟಿತ್ತ್
ವರ್ತಮಾನ ಗೊತ್ತಾಗಿ ಸಾಂತಪ್ಪ
ಸೀತಮ್ಮನ ಜುವ್ವ ತಿಂಬತಿತ್.

ಕಿಚ್ಚಿಗೆ ನೀರ್‌ಗೆ ಹಾದ್ ಸೀತಮ್ಮ
ಅಡಿಗೆ ಮನೆಒಳಗೆ ಕಂಗಾಲ್
ಕೋಳಿ ಗೈಪುಗೆ ಪಾಯಿಸ ಮಾಡಿಕೆ
ಹಂಞನು ಓಡ್ತ್‌ಲೆ ಕೈಕಾಲ್.

ಸೇಸನ ಅಂಗ್‌ಡಿ ದಾಸ್‌ಮೆ ಬಿತ್ತ್
ಎಣ್ಣೆಗೆ ಬಿದ್ದರು ಹೊಡ್ತೇಲೆ
ಬೊಳ್ಳಿನ ಚಾಯದ ಸಕ್ಕರೆ ಕರ್‌ಂಡದೆ
ತಪಲೆಲಿ ಕೊಣ್ದದೆ ಒಲೆಮೇಲೆ.

ಕಡ್ದ ಹುಳಿಮೆಣ್ಸ್ ಕೊದ್ದ್ ಇಂಗಿರು
ಕಡ್ಡೆ ಬಟಾಟೆ ಬೇತೇಲೆ
ಕಾಸಿರು ಬೇಸಿರು ಬೇಯದ ಬಿತ್ತ್
ತಂದ್ ತಿಂಗಾದ್ದ್ ಗೊತ್ತಾತ್ಲೆ.

ಕೇಪಜ್ಜಿನ ಮೊದ್ದ್

ಸೌದೆನು ನೀರುನು ಮುಗ್ದೇ ಹೋವುಟು
ಎಜ್‌ಮಾಂತಿನ ಸೊರ ಕೇಳುದುಲೆ
ಊಟಕೆ ಬಂದ ಮನೆ ಎಜ್‌ಮಾನ
ಜಾಲ್‌ನ ತುಂಬ ಕೊಣ್ದದೆಲೆ.

ಲಾಡಿನ ಚೆಡ್ಡಿ ಲಂಗದ ಮಕ್ಕ
ಮನೆ ಮೂಲೆಂದ ಹೊರ್ಡುದುಲೆ
ಕೊತ್ತಿನು ನಾಯಿನು ಮಾಯ್ಬುನ ಸೂಡಿನು
ಹುಡ್ಕಿರು ಕಾಂಬಕೆ ಸಿಕ್ಕುದುಲೆ.

ಪಕ್ಕದ ಮನೆನ ಕುಕ್ಕಪ್ಪಜ್ಜಂಗೆ
ದೂರಕೆ ಹಂಞಾ ಕಾಂಬೊದುಲೆ
ಗೊರ ಗೊರ ಸೊರಲಿ ಹೇಳುವ ಪಾಳಿ
ಸಾಂತಪ್ಪಂಗೆ ಕೇಳುದುಲೆ.

ನಂಟ್ರ್‌ಗ ಬಂದೊ ನಟ್ಟ ಮದ್ಯಾನ್ನ
ಕೇಳಿ ಬೊಬ್ಬೆ ಕೆಬಿ ಕುತ್ತಾತ್
ಇತ್ತಳೆ ಪೋಯಿಂತ ಮೇಲೆ ನೋಡಿರೆ
ಕಣ್ಣ್‌ಗೆ ಕತ್ತಲೆ ಬಂದೋತು.

ಸುಮ್ಮನಿರ್ ಮಂಜ ಸಬುರು ಸಾಂತಪ್ಪ
ಮನೆ ಎಜ್‌ಮಾನ ತಾಳಪ್ಪ
ಮೂಕು ಬೇನೆಂತ ಕೊಯ್ದರೆ - ಮೋರೆನ
ಪೊರ್ಲು ಯಾರಿಗೆ ಸರಿಯಪ್ಪ.

ಕೇಪಜ್ಜಿನ ಮೊದ್ದ್

ಪ್ರಾಯದ ಮಂಜನ ಪೋರ್ಸ್‌ನ ನೋಡಿ
ಕೇಪಜ್ಜಿನ ತಲೆ ಕೆಟ್ಟೋತು
ಕೊಂಕ್‌ಣಿ ಎಂಮೆಗೆ ಕುದಂಟಿ ಮೊದ್ದ್ಂತ
ಪಂಡ್‌ನ ಗಾದೆನು ನೆಂಪಾತ್.

ಹಿರಿಯೊವುಕೆಂದಿಗು ಒಂದೆ ಆದಾರ
ಕುಟ್ಟುವ ದೊಣ್ಣೆಗೆ ಕೈ ಹೋತು
ಅಂಡ್‌ನ ಮೇಲೆನ ಒಂದೇ ಪೆಟ್ಟ್‌ಗೆ
ಸಾಂತನ ದೆವ್ವ ಬುಟ್ಟೋತು.

ಅಡಿಗೆಕೋಣೆಗೆ ಹುಕ್ಕಂವ ಮಂಜ
ಚೆಟ್ಟೆನೆ ತಿಂದ್ ಹೊರ್‍ಟೋತು
ಸೀತಮ್ಮಂಗೆ ಬಾಗ್‌ಲ್ ಮೂಲೆಲಿ
ನೀರ್ ಕಣ್ಣ್‌ಲಿ ನೆಗೆ ಬಾತ್.

ಮನೆ ಮನೆಗೊಂದು ಅಜ್ಜನು ಅಜ್ಜಿನು
ನ್ಯಾಯಕೆ ಕೋರ್ಟ್ - ಪೋಲೀಸ್
ಬೇಕೇ ಬೇಕು ಇಲ್ಲದ ಸಂಸಾರ
ಹ್ಯಾಂಗಾದಣ್ಣ ಹೈ ಕ್ಲಾಸ್?

ಕೇಪಜ್ಜಿನ ಮೊದ್ದ್

ಹಲ್ಸಿನ ಮರಕು ಮಾಯನ ಮರಕೂ

ಹಲ್ಸಿನ ಮರಕು ಮಾಯನ ಮರಕೂ
ಒಮ್ಮೆ ಜೆಗಳ ಬಾತ್
ಹಬ್ಬಿ ನಿತ್ತಿದ್ದ ಮೆಣ್ಸ್‌ನ ಬೊಳ್ಳಿನ
ನಿದ್ದೆ ಹಾರಿ ಹೋತು

ದೊಡ್ಡ ದೊಡ್ಡ ಹಣ್ಣ್‌ಗಳ ಕೊಟ್ಟನೆ
ಹಲ್ಸಿನ ಮರ ಹೇಳ್ತ್
ಹಣ್ಣೋ ನಿನ್ನದ್? ಮಾಯಣ ಮುದ್ದೆ
ಮಾಯನ ಮರ ಬೊಯ್ತ್

ಮಾಯಣಂತೇಳ್ದೇ ಹಲ್ಸಿನ ಮರಕೆ
ಬಾರಿ ಯೆತೆನೆ ಹಿಡ್ತ್
ಮಾಯಣ ಹೋಕೆ ಏನಾಕುಂತ
ಕಂಡವರದ್ ಕೇಳ್ತ್

ತಲೆಗೊಂದುಂದು ಮೊದ್ದ್ ಹೇಳ್ದೊಂತ
ಹಲ್ಸಿನ ಮರ ಮಾಡ್ತ್
ಮಾಯಣ ಹೋತ್‌ಲೆ ಸೊಪ್ಪುಗ ಬಿದ್ದೊ
ಮರ ಬೋಳಾಗಿತ್ತ್

ಸೊಪ್ಪು ಉದ್‌ರಿ ಬೆರಿ ಕಡ್ಡಿಯಾಗಿ ಕರಿ
ದೆವ್ವದಾಂಗೆ ನಿತ್ತ
ಮರಕೆ ಸುಳಿಯತೆ ಇತ್ತ್‌ಲೆ ಯಾಗೊಳು
ಬಾತಿದ್ದ ಕುಂಡತ

ಬೇಸಗೆ ಬಾತ್ ಹೋತು ಚಳಿಗಾಲ
ಪಲಗಾಳೀ ಬೀಸೀ
ಸಾವಿರ ಮನ್ಸ್‌ಲಿ ಕನ್ಸ್‌ನ ಕಟ್ಟುವ
ಹುಸಿನೆಗೆ ತುಟಿಲಿ ಇಸಿ

ಹಲ್ಸಿನ ಮರ ಹೀಂಗಿರುದರ ನೋಡಿ
ಹೋಗಿತ್ತ್ ಅದರತ್ತ
ಬೀಸಿ ಬೀಸಿ ಮೈ ತಟ್ಟಿ ಹೇಳ್ತಿತ್ತ್
ಒಮ್ಮೆ ನೋಡು ಸುತ್ತ

ಚಿಟ್ಟೆ ಹಕ್ಕಿ ಒಂದು ಗೂಡ್ ತೂಗಿತ್ತ್
ಒಂದು ಕಡ್ಡಿ ನೋಡಿ
ಕೊಟ್ಟುಕೊಡ್ತಲೆಗ ಗೂಡು ಕಟ್ಟಿದ್ದೊ
ಕಬುರುನೆ ಮನೆ ಮಾಡಿ

ಹಂಞ್ಞ ದಿನಗ ಹಿಂಗೆ ಮಾತಿಲ್ಲದೆ ಹೋದೊ
ಆ ದಿನ ಬೊಳ್ಪಾತ್
ಗೂಡುಂದ ಪಿಳ್ಳೆಗ ದೊಡ್ಡ ಬಾಯಿಬುಟ್ಟ್
ಕಿರ್‍ಚ್ಚಿಕು ಸುರು ಆತ್

ಮೂಡ ದಿಕ್ಕ್‌ಲಿ ಹುಟ್ಟಿ ಬಾತ್ ಹೊತ್ತು
ಅವ್ವನಾಂಗೆ ಬಾನ
ಹಕ್ಕಿನ ಪದಕೆ ಚೋಡಿನ ತಾಳ
ತೋಂ ತನನ ತಾನ

ಹಲ್ಸಿನ ಮರಕು ಮಾಯನ ಮರಕೂ

ಹಕ್ಕಿಗ ಗೆಲ್ಲ್‌ಲಿ ಪದ ಹೇಳಿಕಂಡಿದ್ದೊ
ಮೇಲೆ ನೀಲಿ ಬಾನ
ಮರದ ಮನ್ಸ್‌ಲಿ ಮೆಲ್ಲಂಗೆ ಮೊಸ್‌ಗಿತ್ತ್
ಹೊಸಾ ಒಂದು ಗೇನ

ಮೊರಿಗಳ ಕಿಣಿ ಕಿಣಿ ದನಿನ ಕೇಳ್ತ್ ಮರ
ತನ್ನ ಯೆತೆನ ಮರ್ತ್
ಮಾಯಣ ನನ್ನದ್ ಇವ್ಕೇನಾದುಲೆ
ಕಡಿಯವರ ಹೊರ್ತ್

ದೇವುರು ಕೊಟ್ಟದ್ ಬಾಕನ ಬಂದದ್
ನಾವುಗೆ ಬೇಕಾದ್ದ್
ನಡುಲಿ ಯಾರ್ ಅದ್ಕೇನೇ ಹೇಳಿರು
ನಾವ್ಗೇನಾಕಾದ್ದ್?

ಇಂತ ಗೇನ ಹುಟ್ಟಿ ಬಂದದೆ ಹಲ್ಸ್
ಚಿಗ್‌ರಿಕೆ ಸುರುಮಾಡ್ತ್
ಬಾಯಿ ಬೊಡ್ಕಂಡ್ ಓಡಿ ಹೋದವರ
ಹಿಂಡೆ ಬಂದ್ ಸೇರ್ತ್

ಗೆಲ್ಲ್ ಗೆಲ್ಲ್‌ಗೂ ಹೊಸ ಪಚ್ಚೆನ ಎಲೆ
ಹೊಳ್ಪಿದೆ ಹೂ ಬಿಸ್‌ಲ್
ದೂರಂದ ನೋಡಿರೆ ಹಲ್ಸಿನಮರ
ಪುತ್ತೂರು ಬೊಯಿಲ್ ತೇರ್

ಹಲ್ಸಿನ ಮರಕು ಮಾಯನ ಮರಕೂ

ತತ್ವ ಪದ

ದೂರಲಿ ಮುಗಲ್ ಗುಡ್ಡೆ ಕೊಡೀನ ಮುಟ್ಟುವ ಹಾಂಗಿತ್ತ್
ಬಂದ್ ಹೋತಿತ್ತ್ ಹೊತ್ತ್ ಅಲ್ಲಿಂದ ಬೊಳ್ಪಿಗೆ ಹಿಂಬೊತ್ತ್
ಹಾಂಗಿರುದೇ ಇಲ್ಲಿ ನಾವುಗೆ ಒಂದು ದಿನಂತ ಆಗಿತ್ತ್
ಇದರ ಲೆಕ್ಕ ಹಾಕಂಡೇ ಮೊಯಿಂಸನ ಬೊದ್ಕ್ ಕಳ್ದ್‌ಹೋತು

ಎಲ್ಲಿಗೆ ಗೊತ್ತ್‌ಲೆ ಬಾನಲಿ ಬೂಮಿ ತೇಲಿ ಹೋಕಂಡಿತ್ತ್
ಬೀಸುವ ಗಾಳಿನ ಹರಿವ ನೀರ್‌ನ ಸಮ್ಮಂದ ಅದ್‌ಕಿತ್ತ್
ಕಿಚ್ಚಿಂತೇಳುದು ಎಲ್ಲದರೊಳೆಗೆ ಹುಕ್ಕ್ ಹೊರ್‌ಡ್‌ತಿತ್ತ್
ಲೋಕದ ಬಾಳ್ವೆಲಿ ಈ ಸಂಗತಿಗ ಹುರಿ ನೆಯ್‌ದಾಂಗಿತ್ತ್

ಅತ್ತಂದ ಬೇರ್ ಇತ್ತಂದ ಚಿಗ್‌ರ್ ಬಿತ್ತ್‌ಗೆ ಮೂಡಿಬಾತ್
ಅರ್‌ಳಿದ ಹೂವು ಬಾಡಿಕಾಕನ ಬಿತ್ತ್ ನೆಲಕೆ ಹೋತು
ಮೇಲೆಬಿದ್ದ ಮಳೆ ಸತ್ತ್‌ಬಿದ್ದ ಎಲೆ ನೀರ್ ಗೊಬ್ಬರಾತ್
ಕಾಡ್‌ನು ನಾಡುನು ಇದರೊಳೆಗೆಂದ ಹೇಂಗೋ ಹುಟ್ಟಿಬಾತ್

ಗೊತ್ತೇ ಅತ್‌ಲೆ ಸೂರ್ಯಂಗು ಬೂಮಿಗು ಬಾರಿ ಒಳ್ಳದಿತ್ತ್
ದೇವುರು ಕೊಟ್ಟ ನಮ್ಮ ಕಣ್ಣ್‌ಗೆ ಅದ್ ಕಾಣದೆ ಹೋತು
ತುಂಡು ಕೊಳವೆ ಕುಪ್ಪಿಚೂರುಲಿ ಮೊನ್ನ ಇದರ ಕಂಡ್‌ಹಿಡ್ತ್
ಎಲ್ಲ ನಾನೆಂತ ಹೇಳಿಕಾಕನೆ ಗುಡ್ಡೆ ಜೆರ್ದ್ ಬೀತ್
ಆ ಹೊತ್ತುಂದಳೆ ನಾ ಅಲ್ಲಂತ ಹೇಳಿಕೆ ಸುರುಮಾಡ್ತ್

ತತ್ವ ಪದ

ಹಣ್ಣ್ ಬೀಳಿಕನು ಸತ್ಯ ಬುಟ್ಟತ್‌ಲೆ ಇವಂಗೆ ಕಂಡ್‌ಬಾತ್
ತಿಂಬೊದೆ ಬೊದ್ಕಾದವಂಗೆ ಮಾತ್ರ ಅದ್ ಕಾಣದೆ ಹೋತು
ತುಂಬ ಕಂಡವಂಗು ತಿನದೆ ಬೊದ್ಕಿಕೆ ಈ ಬೂಮಿಲಿ ಬೊತ್ತ್
ಯಾವ ಲೋಕಕೇ ಸವಾರಿ ಹೋದರು ಬೂಮಿನೆ ಬೇಕಾತ್
ತೂಗಿ ಬುಟ್ಟ ತೊಟಿಗಿಲ್ ಹೊರ್‌ಟಲ್ಲಿಗೆ ಬಂದೇ ಬರೊಕಾತ್

ನೂರು ತರದ ಜುವ್ವ ಜಾಲ ಎಂದಿಗೂ ಕಚ್ಚಾಡಿಕೆ ಬೊತ್ತ್
ಹಳಬರ ಮಾತ್‌ನ ಹೇಂಗೆ ಪಾಲ್ಸುದೊ ದೇವುರಿಗೇ ಗೊತ್ತ್
ಹೊಟ್ಟೆ ಇಸಿಕನ ಒಂದರ ಒಂದು ತಿಂಬೊದೆ ಹಿಕ್‌ಮತ್ತ್
ಒಂದು ಸತ್ತ್ ಇನ್ನೊಂದು ಬೊದ್ಕುದೆ ಈ ಲೋಕದ ಗುಟ್ಟು
ಎಲ್ಲ ಬೊದ್ಕಲಿಂತೇಳಿರೆ ಅಂತಂವ ಸಾಯುದೇ ನಿಗಂಟ್.



ಅಯ್ಯೋಂತೇಳ್ದೆ ಬಾಳೆ

ಅಯ್ಯೋಂತೇಳ್ದೆ ಬಾಳೆ
ಇದ್ ಎಂಥಾ ಗಾಳಿ ಮಳೆ?
ಮುರ್ದ್ ಬಿದ್ದರೆನು ತಿರ್‌ಗಿನು ನೋಡ್ದುಲೆ
ಮುರಿಯಕೆ ಮುಂದೆನೆ ಕಟ್ಟಿಕು ಹೋದುಲೆ
ನಟ್ಟಂವ ತೋಟಕೆ ಬಾದೇ ಇಲ್ಲೆ
ಅಯ್ಯೋಂತೇಳ್ದೆ ಬಾಳೆ

ಕಣ್ಣ್‌ಗೆ ಮೋರೆಗೆ ಹೊಯಿದದೆ ಜಡಿ ಮಳೆ
ಊಂದ ಕೊಟ್ಟವೆನೊ? ಹಾಂಗೂ ಇಲ್ಲೆ
ಬಿದ್ದಲ್ಲಿ ಕೈಗಳ ಕಡ್‌ದ್ ಹಾಕಿ ಗೊನೆ
ಬೆಳಿಯಲಿಂತ ಮನೆ ಒಳಗೆ ಕಾದವೆ
ಅಯ್ಯೋಂತೇಳ್ದೆ ಬಾಳೆ
ಇದ್ ಎಂತಾ ಗಾಳಿ ಮಳೆ

ಗೊಬ್ಬರ ಕೊಡದೆ ತಿಂಗನೆ ಆತಲೆ
ನೆಂಪಾದರು ಇತ್ತ ಹಾಕುದುಲೆ ತಲೆ
ಕಾಯಿ ಬೆಳಿಯೊಕುಂತ ಬುಡಕೆ ಹಾಕದೆ
ಗೊಬ್ಬರ ಕಟ್ಟುವೆ ದಂಡ್‌ನ ಮೇಲೆ
ಅಯ್ಯೋಂತೇಳ್ದೆ ಬಾಳೆ

ಪೂಂಬೆನ ಇವ್ಕೆ ಕಾಂಬಕೆ ಬೊತ್ತದೆ
ಮುರ್‌ದ್ ತೆಗ್‌ದವೆ ಅರ್‌ಳಿಕು ಬುಡದೆ
ಚೀಪೆ ಹೀಂಪಿಕೆ ಅಯ್ಯೋ ಗಿಳಿ ಬಾದೇಲೆ
ನಟ್ಟವಂಗೆ ಇದ್ ಕೇಳುದೆ ಇಲ್ಲೆ
ಅಯ್ಯೋಂತೇಳ್‌ದೆ ಬಾಳೆ

ಕಾಯಿ ಒಡ್‌ತ್‌ಂತ ತಿರ್‌ಂಟಿ ಇಟ್ಟವೆ
ಕುರೆಗಳಿಗೂ ಮೊದ್ದ್ ಹಾಕಿ ಕೊಟ್ಟವೆ
ಕುಂಡತ ತಿಂದರೆ ಕಂಡಿತ ಸತ್ತದೆ
ಯಾರಿಗೆ ಹೇಳುದು ತಡಿಯಕೆ ಬೊತ್ತದೆ
ಅಯ್ಯೋಂತೇಳ್‌ದೆ ಬಾಳೆ

ಹಣ್ಣ್ ಮಾಡುವೆ ಬಣ್ಣನು ಹಾಕುವೆ
ಬಾರದವಂಗೆಂತ ಕಾದ್‌ನು ಕುದ್ದವೆ
ಹೊಟ್ಟೆ ಇಸಿದವಂಗೆ ತುಂಡುನು ಕೊಡದೆ
ದುಡ್ಡುಬರ್‌ಲಿಂತ ನೇತಾಡುಸುವೆ
ಅಯ್ಯೊಂತೇಳ್‌ದೆ ಬಾಳೆ

ನಡಿಕೆ ಮುಂದೆನೆ ಹೊಂಡಕೆ ಹಾಕುವೆ
ನಟ್ಟಮೇಲೆನೂ ಚಿಗ್‌ರ್‌ಗೆ ಹೊಯ್ದವೆ
ವಿಷ ಹಾಕಿಕೆಂತೇ ಹಗ್‌ಲೆಲ್ಲ ಗೆಯ್ದವೆ
ಸತ್ತರು ಸರಿ ದುಡ್ಡು ಬರ್‌ಲಿಂತ ಹೇಳುವೆ
ಅಯ್ಯೊಂತೇಳ್‌ದೆ ಬಾಳೆ

ಅಯ್ಯೋಂತೇಳ್‌ದೆ ಬಾಳೆ

ಸತ್ತರು ಹುಟ್ಟಿರು ನಾ ಕೈ ಕೊಡೊಕು
ಪೂಜೆಗು ಮೊದ್ದ್‌ಗು ಕೂಸುಗು ಬೇಕು
ಎಲ್ಲ ಕಡೆಗು ನನ್ನ ಚಿಗ್‌ರೇ ಆಕು
ನನ್ನ ಸಂಕಟನ ಯಾರಿಗೆ ಹೇಳೊಕು
ಅಯ್ಯೋಂತೇಳ್‌ದೆ ಬಾಳೆ
ಇದ್ ಎಂತಾ ಗಾಳಿ ಮಳೆ

ಪಿಳ್ಳೆ ತೆಗ್‌ದವೆ ಮೀಂಡಿ ಪಿಕಾಸಿಲಿ
ಗೆಂಡೆನ ಕೆತ್ತುವೆ ಹರಿಮಾಡಿ ಕತ್ತಿಲಿ
ಕಾಯಿ ಚೊಲ್ಲಿ ಚೊಲ್ಲಿ ಎಣ್ಣೆಲಿ ಕಾಸಿ
ಕಡೆಕಾಲಕೆ ನಿಮ್ಮ ಅಳೆಗೆಲಿ ಬೇಸಿ
ಅಯ್ಯೋಂತೇಳ್‌ದೆ ಬಾಳೆ

ತೋರಣಂತೇಳಿ ಜಾಲ್‌ನ ಕರೆಗೆ
ಪೂಕರೆಂತೇಳಿ ಚೋಳುನ ಒಳಗೆ
ಹೋಮಕೆಂತೇಳಿ ಕೆಂಡದ ಕರೆಗೆ
ಬಾಯಿಲಿ ಮಾತ್ರ ಹೊಗ್‌ಳಿಕೆ ಬಾಳೆಗೆ
ಅಯ್ಯೋಂತೇಳ್‌ದೆ ಬಾಳೆ
ಇದ್ ಎಂತಾ ಗಾಳಿ ಮಳೆ

ಕದೊಳಿ ಮೈಸೂರು ಬೂದಿ ಮುಂಡ
ನೇಂದ್ರ ಚಂದ್ರ ಗುಂಡಿಬಾಳೆ ಅವುಂಡ
ಪುಲ್ಲಿಪಚ್ಚೆ ಜಾಂಜಿ ಬಾರ್ ಜಾತಿಗಡ
ಕಾಯಿ ಸಾವಿರ ಇದ್ದರು ನಷ್ಟನೆ ಗಡ
ಮೊನ್ನನ ಮನ್ಸ್‌ನ ನೆನ್ನಿರೆ ಗಡಗಡ
ಅಯ್ಯೋಂತೇಳ್‌ದೆ ಬಾಳೆ
ಇದ್ ಎಂತಾ ಗಾಳಿ ಮಳೆ

ಅಯ್ಯೋಂತೇಳ್‌ದೆ ಬಾಳೆ

ಆಟಿ ತಿಂಗ ಬಾತ್

ಆಟಿ ತಿಂಗ ಬಾತ್,
ಅಂಬಟೆ ಹಣ್ಣಾತ್
ಅಂದ್ ಮಾಡ್‌ದ ಗ್ರೈಪು ಇಂದ್ ನೆಂಪಾಗಿ
ಬಾಯಿತುಂಬ ನೀರ್ ಬಾತ್

ಗುಡ್ಡೆನ ಬರೆ ಮೇಲೆ,
ಬೆಳ್ದ್ ನಿತ್ತುಟು ಹಾಲೆ
ಕಲ್ಲ್‌ಲಿ ಗುದ್ದಿ ಗುದ್ದಿ ಆಟಿ ಮೊದ್ದ್‌ನ ನೆಂಪು
ಬಾಯೆಲ್ಲ ಕೈಂಯಿ ಆತ್

ಆಟಿ ತಿಂಗ ಬಾತ್
ಗುಡ್ಡೆ ತುಂಬ ನೀರಾತ್
ಬೆಟ್ಟ್ ಗದ್ದೆಲಿ ಬಾತ್ ರಟ್ಟೆ ತೋರದ ಒರ್ತೆ
ನಟ್ಟದೆಲ್ಲ ಕುಟ್ಟೆ ಹೋತು

ಆಟಿ ತಿಂಗ ಬಾತ್,
ಅಂತ ಒಂದು ದಿನ ಬಿಸ್‌ಲಾತ್
ಮಳ್ಗಾಲ ಮಯ್‌ಂದ್‌ಲಿ ಮುದ್ದು ಮಾಡಿಕಂಡಿದ್ದ
ಬೊಳ್ಳಿಮರ ಬಾಡಿ ಹೋತು

ಆಟಿ ತಿಂಗ ಬಾತ್,
ಅರ್ದ ಪ್ರಾಯನೆ ಕಳ್‌ದಿತ್ತ್
ಎಂಟ್ ಗಂಟೆಗೆ ಎದ್ದ್ ಒಂಟೆನಾಂಗೆ ನಿತ್ತ್
ಸೊಂಟ ಬೇನೆಂತೇಳಿಯಾತ್

ಆಟಿ ತಿಂಗ ಬಾತ್,
ಬಾರಿ ಮುಡಸೆಳಿ ಹಿಡ್‌ದೋತು
ನೂರು ದಾಟಿದ ನಮ್ಮ ಊರುನ ರಾಂಪಜ್ಜ
ಹೇಳದೆ ಹೊರ್‌ಟೋತು

ಆಟಿ ತಿಂಗ ಬಾತ್,
ನಮ್ಮ ಚೌರಿಂಜ ಊರಿಗೋತು
ಆಟಿ ಕಳಿಯೊಕುಂತ ಚವರ ಮಾಡದೆ ಸಾಂತ
ಕರ್ದಿನಾಂಗೆ ಕಾಂಬತಿತ್ತ್

ಆಟಿ ತಿಂಗ ಬಾತ್,
ಬಾರಿ ಕೋಟ ಗಾಳಿ ಬೀಸಿ ಬಾತ್
ಬಿಸಿನೀರ್ ಒಲೆನ ಗಂಟ್ ಬೆದ್‌ರ್ ಹೊಟ್ಟೆ
ಮಾಡೇ ಹಾರಿ ಹೋತು

ಆಟಿ ತಿಂಗ ಬಾತ್,
ಜಿರಿಕೂಟ ಮಳೆ ಬಾತ್
ಹಗ್‌ಲ್ ಇರ್‌ಲ್ ಹೊಯ್ದ ಮಾರಿ ಮಳೆಗೆ ಹಳ್ಳ
ಊರೆಲ್ಲ ದಾರಿ ಮಾಡಿತ್ತ್

ಆಟಿ ತಿಂಗ ಬಾತ್

ಮುಂಗುಲಿ

ಹೇ, ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಹೇ, ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ

ಮುಂಗುಲಿ ಮುಂಗುಲಿ ಮೀನ್ ಕೋಳಿಗೆ ಹುಲಿ
ಜುಂಗು ಬೀಲದ ಮುಂಗುಲಿ
ಮುಂಗುಲಿ ಮುಂಗುಲಿ ಕೆಂಪುಕಣ್ಣ್‌ನ ಹುಲಿ
ಕೆಂಚಿ ರೋಮದ ಮುಂಗುಲಿ

ಅಪ್ಪ ಅವ್ವ ಮಕ್ಕಮೊರಿ ಬೀಲಕೆ ಬೀಲ ಸಾಲ್ ಹೋಗಿ
ಜಾಲ್ ಕರೆಂದ ಕೋಳಿ ಕದ್ದ್ ಗುಡ್ಡೆಗೆ ಹೋಂವ
ಕುಪ್ಪುಳು ಕಣ್ಣ್‌ನ ಮುಂಗುಲಿ

ಹೇ, ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಹೇ, ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ

ಗದ್ದೆ ಪುಣಿಲಿ ಕುದ್ದ್ ಮೊದ್ದ್ ಎಳ್ಳುವ ನಿನ್ನ
ಎದ್ದಾಂಗೆ ನೋಡಿರೆ ದುಡ್ಡು ಸೊರಿದು ಗಡ
ಜುಂಗು ಬೀಲದ ಮುಂಗುಲಿ

ಹಾವು ಕಣ್ಣಿಗೆ ಬಿದ್ದರೆ, ನಾವು ಓಡಿರು ನೀ
ಓಡದೆ ನಿಲ್ಲುವ ಚೋಟುದ್ದ ಸರ್ದಾರ ನೀ
ಪೀಟುದ್ದ ಬೀಲದ ಮುಂಗುಲಿ

ಕಚ್ಚುವ ಹಾವುನ ಸುತ್ತ ಚಕ್ರ ತಿರ್‌ಗಿ
ಕಾರದ ಕಡ್ಡಿನ ಹಾಂಗೆ ತಿಂಬ
ಕೆಂಚಿ ರೋಮದ ಮುಂಗುಲಿ

ಹೇ, ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಹೇ, ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ
ಮುಂಗುಲಿ ಮುಂಗುಲಿ ಮುಂಗುಲಿ ಮುಂಗುಲಿ

ಮುಂಗುಲಿ

ಬಿರಿಂಬಿರಿ ಓಡ್ತ್

ಬಿರಿಂಬಿರಿ ಮೊರ್ಬದೆ ಕಾನದ ಮರಂದ
ಕೇಳಿಕೆ ಯಾರಿಲ್ಲೆ
ಆಟಿನ ಜೆಡಿ ಮಳೆ ರೆಂಕೆ ಚೆಂಡ್ಯಾದೆ
ಸೂಂಡಿಕೆ ಕೊಡೆ ಇಲ್ಲೆ

ನಿಲ್ಲಕ್ಂತೇಳಿರೆ ಎತ್ತ ನೋಡಿರೂ
ಕಟ್ಟಿದ ಮನೆ ಇಲ್ಲೆ
ಇದ್ದ ಮನೆನ ಜೆನ ಇದರ ಮೀರ್‌ಸ್ಯೊಲೊ
ಹೋಕೆನು ಮನ್ಸಿಲ್ಲೆ

ಬೂಮಿನು ಹೊತುನ್ತು ತಿರ್ಗಿತ್, ಮೊಂಯಿಸನ
ತಲೆನು ತಿರ್ಗಿಹೋತು
ಕಾನದ ಕಾಡೂ ಕಾಡ್‌ನ ಮರನೂ
ಇಲ್ಲದಾಂಗೆ ಆತ್

ಕಾಡ್‌ನ ಮರಂದ ಊರುನ ಮನೆಗೆ
ಬಿರಿಂಬಿರಿ ಬಂದ್‌ಬುಡ್ತ್
ಬಿರಿಂಬಿರಿ ಸದ್ದ್‌ಗೆ ಕೊತ್ತಿನ ಹಿಂದೆನೆ
ನಾಯಿನು ಓಡ್ಯೋತು

ಹೊರೆಗೆನ ಜೆಡಿ ಮಳೆ ಒಳೆಗೆ ಬೆಚ್ಚಂಗೆ
ಬಿರಿಂಬಿರಿ ಪದ ಹೇಳ್ತ್
ಗೋಡೆನು ಮಾಡ್‌ನು ಮಾಡ್‌ನ ಸೋಗೆನು
ಬಿರಿಂಬಿರಿಂಬಿರಿಂತೇಳ್ತ್.

ಬಿರಿಂಬಿರಿ ಓಡ್ತ್

ಬಾಗ್‌ಲ್ ಮುಚ್ಚಿ ಕಿಡಿಕೆ ತೆಗ್ದ ಮನೆ
ಸುರುಗೆ ಲಾಯ್ಕೆ ಇತ್ತ್
ಮಳೆನಿತ್ತೋತು ಮಂಯ್ದ್‌ನು ಹೋತು
ಹೂಬಿಸ್‌ಲ್‌ನು ಬಾತ್

ಆಟಿನ ಅಟ್ಟನ ಸೋಣಲಿ ಗುಡ್ಡಿದೊ
ಜನ ಜಾತ್ರೆನೆ ಸೇರಿ
ಬಲೆಗುಡ್ಸವರ ಮಾಯ್ಬುನ ಪೆಟ್ಟ್‌ಗೆ
ಬಿರಿಂಬಿರಿ ಬೆನ್ನ್ ಉರಿ

ದೊಡ್ಡೊವು ಸಣ್ಣೊವು ಗೋಡೆಗು ಬಾಯಿ
ಬಾರಿ ಗುಲ್ಲೇ ಆತ್
ಪರೀಕ್ಷೆ ಕಳ್ದ್ ಮಕ್ಕ ಮನೆಗೆ ಬಂದೊ
ಬಿರಿಂಬಿರಿ ಓಡ್ಯೋತು

ಹೇಂಗಿದ್ದರು ನನ್ನ ಕಾಡೇ ಪೊಲ್ರ್
ಇರುದೇ ಪೊಲ್ರ್ ಅಲ್ಲೀ
ಹಂಚಿ ಹಾರುವಂಥ ಬೊಬ್ಬೆಗೆ ಮೊನ್ನ
ಹೇಂಗಿದ್ದವೆ ಇಲ್ಲಿ?

ಗುಡ್ಡೆಗೆ ಗುಡ್ಡೆ ಅಡ್ಡ ಇದ್ದದೆಂತ್
ಹಿರಿಯರ ಮಾತುಟ್ಟು
ಇದ್ದಲ್ಲೇ ಇದ್ದ್ ಬೊದ್ಕಿ ಹೋದರ್‌ಲಿ
ನೋಡಿರೆ ಸುಕ ಉಟ್ಟು.

ಬಿರಿಂಬಿರಿ ಓಡ್ತ್



ಕುದ್ಕ ಹೊತ್ತ ಕೋೞಿ

ಕುದ್ಕ ಹೊತ್ತ ಕೋೞಿ ಒಂದು
ಬೊದ್ಕಿ ಬಾತ್ ಬಂದಮೇಲೆ
ಕೇರಿಕೆನೂ ಹಾರಿಕೆನೂ ರೆಂಕೆ ಬಾದುಲೆ

ಕುದ್ಕನೊಟ್ಟಿಗೆ ಪೆಟ್ಟ್ ಮಾಡಿ
ಬೊದ್ಕಿಬಂದ ಕೋೞಿ ಈಗ
ಕಂಣ್ ಬುಟ್ಟದೆ ಬಾಯಿ ಬುಟ್ಟದೆ ಕೂಂಗಿಕಾದುಲೆ

ಕಾಸಿಕ ಸರಾಯ ಕೊಟ್ಟ್
ಕರ್ಂಬುೞಿ ಮುಲಾಮು ಹಾಕಿ
ಕರಿಮೊದ್ದ್‌ಗೆ ಕೋೞಿನ ಬಣ್ಣ ಕೊರ್ಗನ ತಲೆ.

ಅಯ್ಯೊ ಪಾಪ ದೆಂಡ ಹೋಗಿ
ಬುಡ್ತಿತ್ತಲೆಂತೇೞಿ ಮನೆಲಿ
ಬತ್ತಹಾಕ್ತಿದ್ದೊ - ಹಬ್ಬಕೆ- ತಿಂಬಕಾದೊಲೆ

ಬತ್ತತಿಂದ್ ಬಣ್ಣ ಮೊಗ್ಚಿ
ರೆಂಕೆ ಬೊಡ್ದ್ ಕೂಂಗಿಕನ
ಚೆಂಟೆಲಿದ್ದ ಮೊಣ್ಣ ನಾಯಿ ಹೊಣ್ಕಿ ಬೀತಲೆ

ಆಚೆ ಮನೆ ಹೊನ್ನಪ್ಪಣ್ಣನ
ಓಟೆನಂತ ಬೇಟೆನಾಯಿ
ಅಂದ್‌ಂದ ಮುಂದೆಗೆ ಎಂದೂ ಕೋೞಿ ಹಿಡ್ತ್‌ಲೆ

ಹಿಂಬೊತ್ತ್ ಬೊಳ್ಗಿಗೆ ಹೂಂಜ
ಬಡ ಬಡಂತ ರೆಂಕೆ ಬೊಡ್ದ್
ಮಾಡ್ ನೋಡಿ ಓಡ್ದ ಕುದ್ಕ ತಿರ್ಗಿ ಬಾತ್‌ಲೆ

ಹೂಂಜ ಹೋದ ದಾರಿತುಂಬ
ಹೇಂಟೆಗೆಲ್ಲ ಮೊಟ್ಟೆ ಹಾಕಿ
ಕೂಂಟೆಗೆಲಿ ಪಿಳ್ಳೆಗಳ್ದ್ ತಾಳ ಮದ್ದಲೆ.

ಜಾತ್ರೆ ಕಳ್ದ್ ಕೋಳಿ ಕಟ್ಟ
ಮನೆಗೆ ಬಂದ ಸಾಂತಪಣ್ಣ
ಜಾಲ್ ಕರೆಲಿ ಮಾಲಿ ನಿತ್ತ್ ರೇಟ್ ಕೊಳ್ದೊಲೆ

ಜುಟ್ಟು ನೋಡಿ ಮುಳ್ಳು ನೋಡಿ
ತೂಕನು ಪೋರ್ಲುನುನೋಡಿ
ಮೊರ್ಲ್ ಮಾತ್ ಕೇಳಿ ಹೂಂಜ ಕೊಡ್ಡಿಬೊಡ್ತಲೆ

ಮೀನ್ ತಂದ ಅಜ್ಜ ಬೇರಿ
ಕೋಳಿ ಬೇಕುಂತೇಳ್ದವನ
ಕೇರ್ ಮಾಡದೆ ನೋಡಿ ಹೂಂಜ ನಡ್ದೇ ಹೋತಲೆ

ಮಾಡ್ ಮೇಲೆಂದ ಹೂಜ ಕೂಂಗಿ
ಮನೆಜನಕೆ ನಿದ್ದೇ ಬುಟ್
ಜನಕು ದನಕು ಹೊಟ್ಟೆ ತುಂಬಿತ್ ಹೂಂಜ ವಾಚಲೆ.

ಹೂಂಜಾಗಲಿ ಹೇಂಟೆ ಆಗಲಿ
ನಾಯಾಗಲಿ ನಾವಾಗಲಿ
ಬೊದ್ಕುವಾಂಗೆ ಬೊದ್ಕಿರೆ ನೋಡಿ ಬಾರೀ ಬೆಲೆ.

ಕುದ್ಕ ಹೊತ್ತ ಕೋಳಿ

ಆ ಕಾಲ

ಬೀರಿ ಕಕ್ಕೆ ಒಂದು ಕಾರಿಕಟ್ಟಿತ್ತ್
ಸತ್ತ ಚಾಳೆ ಕೊಡಿಲಿ
ಕುಂಡಕೋಳಿಗ ಗೂಡು ಕಟ್ಟಿದ್ದೊ
ಬೆಳ್ದ ಗದ್ದೆ ನಡುಲಿ
ಮನೆ ಎಜ್‌ಮಾನನ ಗುಣುಗುಣು ಮಾತ್
ಹೊಗುಳು ಗದ್ದೆ ಪುಣಿಲಿ
ಸೀತೆಹಕ್ಕಿ ಮೊರಿ ಹಿಂಟೆನ ಮನೆಂದ
ಕರಿದು ಸಣ್ಣ ಸೊರಲಿ
ಕುರ್‌ಣಿ ಜೋಡಿಗೆ ಕುದ್‌ರೆ ಸವಾರಿ
ಕಳ್ಳ ದನದ ಮೈಲಿ
ಕರ್‌ಂಡೆ ಹಿಂಡ್ ತುಂಬೆನ ಸೈನ್ಯ
ಮಜೆಲ್ ಗದ್ದೆ ಕೊಡಿಲಿ.
ಪಾಳಿ ಬುಡ್ಸುವಾಂಗೆ ಕೇಳಿ ಹೇಳುವಾಂಗೆ
ಜೇನ್‌ಗ ಕೊಡಿ ಕೊಡಿಲಿ
ಗದ್ದೆ ಒಡ್ಡಿತ್ತ್ ಪುಣಿ ಜೆರ್ದಿತ್ತ್
ಮಳ್ಗಾಲದ ಕಡೆಲಿ
ಅಡ್ಕಲಿ ಮೇಯುವ ಕಾಳಂಗು ಬೊಳ್ಳಂಗು
ಪಂತ ತಿಂಬದರ್ಲಿ
ಬಾನದ ತುಂಬ ಬಿಳಿ ಬಿಳಿ ಮೋಡ
ನೀಲಿ ನೀಲಿ ನಡುಲಿ

ಹೊತ್ತು ಹೋಗಿ ಬಾತಿತ್ತ್ ಹಿಂಬೊತ್ತ್
ದಿನಾ ದಿನದ ಕಡೆಲಿ
ಮಕ್ಕಳ ಬೊಬ್ಬೆ ಹುಕ್ಕ್ ಹೊರ್ಟಿತ್ತ್
ಮೂರು ಮೂರು ಸಂದೆಲಿ
ಜಾಲ್ ತುಂಬ ಅಲ್ಲಿ ಹೊಸ ಬತ್ತದ ರಾಸಿ
ಮಂಟಮೆ ಜಾಲ್ ಕೊಡಿಲಿ
ಪಿಜಿನ್ ಸಾಲ್ ಹೊರೆ ಹೊತ್ತ್ ಸಾಗಿತ್ತ್
ರೈಲ್‌ನಾಂಗೆ ನಡುಲಿ.
ಅಜ್ಜ ಎಲಾಡಿಕೆ ಗುದ್ದಿ ಮಾತಾಡ್ತ್
ಅಜ್ಜಿ ಜಗಲ್ ಕೊಡಿಲಿ.
ಸುತ್ತ ಕಾಡ್ ಅದರಾಚೆಗೆ ಪೂಮಲೆ
ಪೊಲ್ಗ್ನನ ಪೆರಾಜೆಲಿ
ಗದ್ದೆ ಕೊಡಿಲಿ ಸಾಲೆ ಸಾಲೆ ಬುಡಲಿ ಮನೆ
ಕೆಲ್ಸ ತುಂಬ ಕೈಲಿ.
ಬೊದ್ಕ್ ಇರುದಿಷ್ಟೆ ಎಲ್ಲಿ ಹೋಗಲಿ
ಕೇಳಿ ನೋಡಿ ಹೇಳಿ.
ಇಲ್ಲದ್ದ್ ಇಲ್ಲೆ ಇದ್ದದೂ ಇಲ್ಲೆ
ಇರುದರ್ಲಿ ಸುಕಲಿ ಬಾಳಿ.

ಆ ಕಾಲ

ಒಮ್ಮೊಮ್ಮೆ

ಇತ್ತೀಚೆಗೆ ಹುಟ್ಟಿದೊವುಕೆಲ್ಲ ಹೀಂಗೆ–
ಹೊಗೆ ಬರದ ಕಿಚ್ಚಿನೇ ಬೇಕು
ಸಾಬಾನ್ ಮುಟ್ಟಿದ್ದೇತಟ್ಟ್ ಸೀರೆಂದ
ಮೊಣ್ಣ್ ಹೋಕು
ಮಕ್ಕ ಬೇಡೇ ಬೇಡ, ಆದರೆ ಹೆಣ್ಣ್ ಬೇಕು.
ಒಟ್ಟುಮೇಲೆ ಬೆಗ್‌ರ್ ಬಾಕೀ ಬೊತ್ತ್, ಕೆಲ್ಸ ಆಕು
ಎಲ್ಲಿ ಹುಟ್ಟಿತೋ ಗೊತ್ತ್‌ಲೆ
ಎಲ್ಲಿಗೆ ಮುಟ್ಟಿದೆನೋ ಗೊತ್ತ್‌ಲೆ
ಒಂದು ಸತ್ಯಂತಾದೆ
ಅಲ್ಲಿಂದ ಬಂದೊವು ನಾವು
ಅಲ್ಲಿಂದಳೇ ಬಂದಿರೊಕು ಇದೂ
ಹಾಂಗಿದ್ದಮೇಲೆ ಸರಿಲಿ ತಪ್ಪು ಯಾದ್?
ಒಂದರ ಬುಟ್ಟ್ ಒಂದರ ತಪ್ಪುಂತೇಳ್ರೆ
ಸರಿ ಹೇಂಗಾದು?
ಹಬ್ಬಲಿ ಮೂರ್ ದಿನ ನಕ್ಕುಳು ಹೇಳ್ದುಗಡ
ನಂಗೂ ಉಟ್ಟು ಯಿಸ
ನಾಕನೆ ದಿನಕೆ ಬದ್‌ಲಾದೆ ಅದರ ಯೇಸ
ಬಿತ್ತ್ಂದ ಹುಟ್ಟಿದೆಂತೇಳ್ದು ಅದ್ ಲೋಕಾರೂಡಿ
ಅಲ್ಲಿ ನೋಡಿ–
ಚಿಗ್‌ರ್ ಬಂದದೆ ಹೇಂಗೆ ನಟ್ಟರೂ

ಒಮ್ಮೊಮ್ಮೆ

ನಡು
ಬುಡ
ಕೊಡಿ!
ಹಿಂಗಿದ್ದಮೇಲೆ ಹುಟ್ಟುದು, ಸಾಯುದುಂತೇಳ್ರೆ
ಬೇರೆ ಬೇರೆ ಅಲ್ಲನೇ ಅಲ್ಲಬುಡಿ
ಇದರ ಕೇಳ್ದವನೇ ಸಾಂತಪ್ಪ ಹೇಳ್ತ್–
ಅಣ್ಣ ನನ್ನ ತಲೆಗೆ ಹೀಂಗೆಲ್ಲ ಬಾತೇಲೆ!
ನೀವು ಯಾಕೆ ಇದರ ಹೇಳಿಕಂಡ್ ತಿರ್‍ಗಿರೆ?
ಯಾಲ ಕತೆನೆ!
ನಾ ಕಂಗಾಲ್, ಇವನೋ
ಕುಡಿದು ಹೆಂಡ,
ಕಾಡುದು ಮೊರ್ಲ್
ನೋಡ್ರೆ ಇಂವ ಹೇಳುದೂ ಸತ್ಯ
ಕಂಡಿತ ಇವಂಗೆ ತಲೆಲಿ ಕರ್ಲ್
ಅಲ್ಲಿಂದಮೇಲೆ ಈಗ ನಾ ಬದ್‌ಲಾದ ಜೆನ
ಸಾಂತ ಇಲ್ಲಿನ ಸಾಜಾ ಎಜ್‌ಮಾನ
ಮಾತೇನೋ ಸರಿ, ಹಾಂಗೆಂತ
ಇವನ ಹೊತ್ತ್ ತಿರ್‍ಗಿರೆ ಒಳಿದೊ ನನ್ನ ಮಾನ?
ಸತ್ಯಂತೇಳುದಕು ಕೂಡ ಎಷ್ಟೊಂದು ಮೋರೆ!
ಆಟಿಗೂ ಸೋಣಕೂ ಕಂಡಿತ ಅದ್ ಬೇರೆ ಬೇರೆ
ಗುಡ್ಗು ಸಿಡ್ಳ್ ಗಾಳಿ ಮಳೆಹೊಯ್ದ್ ಉಕ್ಕಿ
ಮನ್ನೆನ ಹಾಂಗೆ ನೀರ್ ಬಂದ್ ತುಂಬಿಕನ ಗೊತ್ತೇ ಆದುಲೆ
ಯಾದ್ ಆಚೆಕರೆ ಯಾದ್ ಈಚೆಕರೆ.

ಒಮ್ಮೊಮ್ಮೆ

ಅದ್ ಕೆಮ್ಮಿತ್

ಕೇಳಿರೂ ಕೇಳದಾಂಗೆ ಮಾಡ್ದೊ ಮಕ್ಕ
ಎಲ್ಲ ಮನೆಗಳ ಕತೆನೇ ಅದ್, ಯಾರಿಗುಟ್ಟು ಪುರುಸೊತ್ತು
ಕೇಳಿಕೆ ಅದರ ಕಷ್ಟ ಸುಕ?
ಎಲ್ಲವರ ಊಟತಿಂಡಿ ಬಟ್ಟೆಬರೆ ಆಟಪಾಟ ರಂಪಾಟ
ಏನೆಲ್ಲ ಇಲ್ಲೆ? ಎಲ್ಲದಕೂ ಕಡೆಗೊಮ್ಮೆ
ತಲೆಕೊಡಕಾದ್ದ್ ಅದ್
ಹಾಂಗೆಂತ ಯಾರಿಗೂ ಏನೂ ಹೇಳಿಕೂ ಆಗದ್
ಯಾಕೆ ಹೀಗೆಂತ ಯಾರಿಗೂ ಗೊತ್ತ್‌ಲೆ
ಗೊತ್ತಿದ್ದೊವೂ ಬಾಯಿಬುಟ್ಟ್ ಹೇಳ್ದುಲೆ
ಹೆಣ್ಣ್-ಕಣ್ಣ್-ತಾಯಿ- ಬಾಯಿಲಿ
ಕೇಳುವಾಂಗೆ ಯಾರು ಹೇಳ್ದುಲೆ - ಮನ್ಸ್‌ಲಿ ಮಾತ್ರ
ಹೇಂಗಾರ್ ಸಾಯಿ
ಪಾಯ್ಸ ಸುರ್ದ್, ಕಾರ್‌ಂದ ಇಳ್ದ್
ನಿದ್ದೆ ಮಾಡಿಕೆನೊ ಪುರ್ಸೊತ್ತಿಲ್ಲದೆ ಸುಕಲಿದ್ದ ಜೆನ
ಇಂದು ಮೊದುವೆ ನಾಳೆ ಮಕ್ಕಂತೇಳುವ ಸ್ಪೀಡ್
ತಳಿಯದಿದ್ದರೂ ಬದುಲ್ಸುವೆ ಹೊತ್ತಿಗೊಂದು ಜೋಡ್-
ಪಾಲ ತುಂಡಾದ್ದೇ ಗುಪ್ಪಟೆ ಕುದ್ದ್
ಮಿಣಿ ಮಿಣಿ ನೋಡುವೆ ಬಾನ,

ಅದ್ ಕೆಮ್ಮಿತ್

ಹಿಂದೆಲ್ಲ ಇದ್ದದ್ ಕೈನ ವಾಚ್‌ನ ಮೇಲೇ ಗೇನ.
ಒಡ್ಡಲ್ಲಿ ನೀರಿತ್ತೋ, ನೀರಿದ್ದಲ್ಲಿಯೇ ಒಡ್ಡೋ ಅಂತೂ
ಅದರ ಮನ್ಸ್‌ಂದ ಉಕ್ಕಿದ್ ಇವರ ಕಣ್ಣ್‌ಲಿ ಹನ್ಕಿತ್
ಅಲ್ಲಿ ಉಸುರ್ ನಿತ್ತಿತ್ತ್; ಮಾತ್ ಸತ್ತಿತ್ತ್.
ಅದ್ ಹಂಞ ಕೆಮ್ಮಿತ್ತ್.
ಬಂದರ್‌ಗೆ ಹಡ್ಗ್ ಬಾಕನ ಹೇಂಗೋ ಬಿದ್ದ ಪಿಜಿನ್
ಸಂದ್‌ಲಿ ಸಂಸಾರ ಮಾಡಿ ಸುಕಲಿ ಪಾಂಬಿದೆ
ಇಂದೋ ನಾಳೆನೋ ಗೊತ್ತ್‌ಲೆ
ಹಳ್ತಾಕನಾರ್ ಹಡ್ಗ್ ಮುಳ್ಗಿದೆ
ಸುಡ್ಕಿರಿಲಿ ಕುದ್ದಂವ ಅಳುದಾದರೂ ಹೇಂಗೆ?
ಅವೊನು ಏನು ಒಳಿಯಂವನೊ ಅತ್ತರೆ ಹಾಂಗೆ?
ಕಾಡ್‌ಗೆ ಬಿದ್ದಕಿಚ್ಚಿ ಒಳ್‌ಂಗಿಲ್‌ನೊಟ್ಟಿಗೆ ಹಸಿನೂ ಹೊತ್ತ್‌ಸಿದೆ
ಅದರೊಟ್ಟಿಗೆ ಕೇಳ್ರೆ ಅದ್ ಸರಿಂತನೇ ಹೇಳ್ದೆ.
ಅದರ ಪ್ರಕಾರ ಜುವ್ವಲಿ ಇರ್ದೂ ಇಲ್ಲದೆ ಇರ್ದೂ ಒಂದೇಗಡ
ನೀ ಹೇಂಗಿದ್ದರು ನಾ ಒಳೆಂತೇಳ್ದೆ
ಮಾತ್ ಕೇಳಿಕನನೇ ಎದೆ ಹೊಡ್ಕಂಡ್ದೆ
ಬಡ ಬಡ
ಬಡ ಬಡ.

ಅದ್ ಕೆಮ್ಮಿತ್

ಸಂತೆ

ಪೇಟೆಂದ ಹಳ್ಳಿಗೆ ಬಾಕೆ ಸುರಾತ್
ಗವರ್‌ಮೆಂಟ್ ಬಸ್ಸು
ಪೆಟಿಗೆಂದ ಹೊರ್ಟ್‌ತ್ ಸಂತೆಗೆ ಜೆನಗಂಗಳ
ಆರ್‌ಮೂರು ಕಾಸ್

ಸಂತೆಗೆ ಹೋಕನ ಕೈಲಿ ಇರುದುಲೆ
ಹಿಂದೆನಾಂಗೆ ಚೀಲ
ಸಂತೆ ಕೊಟ್ಟದ್ ಮನೆ ಸುತ್ತ ಬೆಳ್ದದೆ
ಹನ್ಮಂತನ ಬೀಲ

ಬಾಮಿನ ನೀರ್ ಅಲ್ಲಿಗೆ ಬೇಡ
ಬಿಸಿಲೆರಿ ಉಟ್ಟು ಅಲ್ಲಿ
ಹಾಲಿಗು ನೀರಿಗು ದುಡ್ಡುಲಿ ಪಂತ
ಕೇಳಿನೋಡಿ ಹೇಳಿ

ಕುಪ್ಪಿನ ತುಂಬ ಕಪ್ಪು ಕೆಂಪು ಬಣ್ಣ
ಕೋಲದ ಕೋಲ ಅಲ್ಲಿ
ಗದ್ದೆಗೆ ಹೊಡ್ದರೆ ಬಂಬಚ್ಚಿ ಸತ್ತದೆ
ಕುಡ್ದರೆ ಹ್ಯಾಂಗೆ ಹೇಳಿ

ಕಾಮನ ಬಿಲ್ಲಿಗು ನಾಚಿಕೆ ನೋಡಿ
ಡಬ್ಬಿನ ಕೇಂಡಿ ಬಣ್ಣ
ಸಂತೆನ ಬಣ್ಣ ಕಣ್ಣ್ ತುಂಬಿಕನ
ನಿತ್ತವೆ ಯಾರಣ್ಣ?

ಅಪ್ಪಂಗೆ ಸಂತೆಲಿ ಮಾರುವ ನೆವನ
ಅವ್ವಂಗು ಸಮ ಪಾಲ್
ಮಕ್ಕಳ ಹಿಂದೆನೆ ಮೊರಿದಿಬ್ಬಣ ಬಂದೊ
ನೆಳಂಗಳು ಸಾಲ್ ಸಾಲ್

ಮೆಟ್ಟಿಳಿಯಕೆ ಆಗದಿದ್ದರು ಅಜ್ಜನ
ಬಾಯಿಲಿ ಸಂತೆ ಸುದ್ದಿ
ಹೂಂಗುಟ್ಟಿದೆ ಅಜ್ಜಿ ಕಣ್ಣ್ ಬಾಯಿ ಬುಟ್ಟ್
ಎಲಾಡಿಕೆಗೆ ಗುದ್ದಿ

ಸಂತೆನ ಸೊತ್ತ್‌ನ ಬಾಳಿಕೆ ಸುದ್ದಿ
ಕೇಳುವ ಹಾಂಗಿಲ್ಲೆ- ಹಾಂಗೆ
ಇಂದ್‌ನ ಮೊಯಿಂಸ ನಾಳೆ ಇರುದುಂತ
ಹೇಳಿಕೆ ಆದೇಲೆ.

ಏಳ್ ದಿನನು ಏಳೂರುಲಿ ಸಂತೆ
ಸಂತೆಗೆ ರಜೆ ಇಲ್ಲೆ
ಸಂತೆಂದ ತಂದೇ ತಿಂದ್ ತಿಂದ್‌ದ್
ಬೆಳ್ಸಿಕೆ ಗೊತ್ತೇಲೆ.

ಸಂತೆ



ಸಾಂತಪ್ಪನ ಹುಲಿ ಬೇಟೆ

ಹುಲಿ ಬಂದಿತ್ತ್ ಸಾಂತಪ್ಪಣ್ಣ
ಒಳಿಕಟ್ಟಿದ್ದ ಮರದಡಿಗೆ
ಕೇಪುನ ಬೆಡಿಲಿ ಇತ್ತೊಂದು ಈಡ್
ಕುದ್ದದ್ ಮುಳ್ಳು ಹಂದಿಗೆ.

ಬಾರಿ ದೊಡ್ಡ ಹುಲಿ ಬೀಲನು ಕುತ್ತ
ಒಳಿಯಿತ್ತೊಂದು ಮಾರ್‌ಗೇ
ಬೀಲದ ರೋಮ ಮುಟ್ಟುವಾಂಗಿತ್ತ್
ಸಾಂತಪ್ಪಣ್ಣನ ಅಂಡ್‌ಗೆ

ಬಾಯಿ ಬುಟ್ಟದೆ ಕೋರೆನು ಕಂಡದೆ
ಸಾಂತಪ್ಪಣ್ಣನ ಕಣ್ಣ್‌ಗೆ
ಮೂಕುನ ಉಸುರೇ ಹೊರೆಗೆ ಬಾತ್‌ಲೆ
ಸುದ್ದಿಗೊತ್ತೇಲೆ ಊರುಗೆ.

ಬಂದ ಮಾರಿ ಒಮ್ಮೆ ಹೋದರೆ ಸಾಕ್‌ಂತ
ಸಾಂತ ಬೇಡ್‌ತಿತ್ತ್ ಮನ್ಸ್‌ಲಿ
ಅಡ್ಡಬೊಲಿಪಂಗೆ ಆಕೊಳಿಕೆನು ಬಾತ್
ನಿತ್ತಲ್ಲೆ ಮಲ್ಗಿತ್ ಮರದಡಿಲಿ

ಗಂಟೆ ಎಂಟಾತ್ ಸಾಂತ ನಾಪತ್ತೆ
ಮನೆಲಿ ಸೀತಮ್ಮ ಗಡಿಬಿಡಿಲಿ
ಕರ್ದರು ಕೇಳಿರು ಸೊರ ಬಾದೇಲೆ
ಹಕ್ಕಿ ಮೋರ್ಟವೆ ಮರಕೊಡಿಲಿ

ಹುಲ್ಲುನ ಹಾಸಿಗೆ ಹಕ್ಕಿನ ಪದಗ
ಹುಲಿ ಸತ್ತಾಂಗೆ ಮಲ್ಗಿತ್ತ್
ಬಾರೀ ನಿದ್ದೆನೆ ಬಂದಾಂಗಿದ್ದರು
ಹುಲಿನ ಮನ್ಸ್ ಕೊಡಿ ಕೆಬಿಲಿತ್ತ್

ಸಾಂತನ ಕೈನ ಎಲಡಿಕೆ ಸಂಚಿ
ನಡ್ಗಿ ಬಿದ್ದೋತು ಹುಲಿ ಮೇಲೆ
ಎದ್ದ ಹುಲಿ ಕಚ್ಚಿ ಸಿಗ್ದೇ ಹಾಕಿತ್
ಹೊಸೆಪು ನೇಲ್‌ತಿತ್ತ್ ಬಾಯಿಲೇ

ಪಾಕದ ಹೊಸೆಪು ಪಳ್ಂಗಿ ಲಾಯ್ಕಿತ್ತ್
ಹುಲಿಗೆ ಸೀನ್‌ನ ಸರಮಾಲೆ
ಹಲ್ಲ್‌ಗೆ ಸೆಕ್ಕಿದ ಸೆಕ್ಕಿದ ಹೊಸೆಪುನ ತೆಗಿಯಕೆ
ಎಷ್ಟ್ ಪೇಚಾಡಿರು ಆತೇಲೆ.

ನಿದ್ದೆ ಹಾಳಾದ ಅಜ್ಜ ಹುಲಿ ಹೋತು
ಕೆಮ್ಮಿ ಸೀನಿಕಂಡ್ ಕಾಡಿಗೆ
ಬೊದ್ಕಿರೆ ಸಾಮೀ ಬೇಡಿ ತಿಂಬೆಂತ
ಸಾಂತ ಓಡ್‌ತಿತ್ತ್ ಮನೆಕಡೆಗೆ.

ಸಾಂತಪ್ಪನ ಹುಲಿ ಬೇಟೆ



ಸಾಂತನ ಪಂಚೆ

ಸಂತೆಂದ ಬಂದ ಸಾಂತಪ್ಪಣ್ಣ
ಕೋಣದ ಹಿಂದೆ ಹೋತಿತ್ತ್
ಸಾಂತನ ಬೊಬ್ಬೆಗೆ ಕೇರೇ ಮಾಡದೆ
ಕೋಣ ಮುಂದೆ ಮುಂದೆ ಸಾಗಿತ್ತ್

ಎಲ್ಲಿಂದಲೋ ಬಂದ ಬೆಳ್ಳಿ ಕೊರ್‌ಂಗ್
ಕೋಣನ ಮೇಲೆ ಕುದ್ದಿತ್ತ್
ಉಳುಂಗು ಹೆರ್ಕಿ ಕೋಣನ ಬೆನ್ನ್‌ಲಿ
ಆನೆ ಸವಾರಿ ಮಾಡ್ತಿತ್ತ್

ಒಮ್ಮೆಗೆ ನೋಡಿಕೆ ಸಾಂತಂಗೆ ಕೊರ್‌ಂಗ್
ಕಳ್ಳ್‌ನ ಕುಪ್ಪಿಂತಾಗೋತು
ಕೋಣನ ಬೆನ್ನ್‌ಲಿ ಕಳ್ಳ್ ಹೇಂಗೆಂತ
ಗೇನಮಾಡಿ ತಲೆ ಕೆಟ್ಟೋತು

ಹಕ್ಕಲೆ ಹೋಕನ ಅಲ್ಗಿತ್ ಮುಲ್ಲೆ
ಕೊರ್‌ಂಗ್‌ಂತೇಳ್ದು ಗೊತ್ತಾತ್
ಬಂದ ಕೋಪಕೆ ಬೀಸಿದ ಕೋಲುಗೆ
ಕೋಣದ ಬೆನ್ನ್‌ಲಿ ಬರೆಬೀತ್

ಸಡನ್ ಬಿದ್ದ ಸಾಯುವ ಪೆಟ್ಟ್‌ಗೆ
ಕೋಣಂತೇಳುದು ಕುದುರ್‍ಯಾತ್
ಚುಳ್ಳುವ ಕೋಣದ ಚೊಪ್ಪುನ ಬೊಳ್ಳಿ
ಸಾಂತನ ಪಂಚೆಗೆ ಸಿಕ್ಕೋತು

ಪಟ್ಟೆನೂಲುನ ಗಟ್ಟಿ ಕೋಮಣ
ಸಾಂತನ ಮಾನ ಕಾಪಾಡ್ತ್
ಬೆರಿಮ್ಮೆ ಸಾಂತನ ಕರಿ ಮೈ ನೋಡಿ
ಪಾರೆಕಲ್ಲಿಗೂ ನೆಗೆಬಾತ್

ಕೋಣಂಗ ಬಂದರು ಬಾರದ ಗಂಡನ
ಸೀತಮ್ಮ ಹುಡ್ಕಿಕೆ ಸುರುಮಾಡ್ತ್
ಮಯ ಮಯ ಬೊಳ್ಪುಲಿ ನಾಲಿಕೆನಾಂಗೆ
ಕೋಮಣ ಕಂಡ್ ಓಡ್ಯೋತು

ಹೆಣ್ಣ್‌ನ ಹಿಂದೆ ಬೆರಿ ಮೈ ಸಾಂತನು
ಎದ್ದ್ ಬಿದ್ದೋಡಿ ಮನೆ ಸೇರ್‍ತ್
ಗ್‌ಡ್ ಗ್‌ಡ್ ನಡುಗುವ ಹೆಣ್ಣ್‌ನ ನೋಡಿ
ದೆವ್ವ ಬಂದುಟುಂತಾಗೋತು

ಚೊಂಬುಲಿ ನೀರ್ ಚಿಬುಳಿನ ದೀಪ
ಸಾಂತ ಗಡಿಬಿಡಿಲಿ ತಕಬಾತ್
ಕುರ್ದಿನೀರ್‌ಗೆ ಅಣ್ಣಿಣ ಸುಣ್ಣ
ಹುಡಿರ್‍ಕು ಸಿಕ್ಕದೆ ಪೇಚಾಡ್ತ್.

ಸಾಂತನ ಬೊಬ್ಬೆಗೆ ಸುತ್ತುನ ಜೆನಗ
ನೆಳಗಳ ಹಾಂಗೆ ಸೇರ್‍ಯಾತ್
ಮಾತಾಡುದುಲೆ ನಡ್ಡಿದೆ ಹೆಂಗ್‌ಸ್
ತಲೆಗೊಂದೊಂದು ಮಾತಾತ್.

ಯಾರ್ ತಾಯಿ ನೀ ಯಾಕೆ ಬಂದೊಳಂತ
ಸಾಂತ ಕೇಳಿಕೆ ಸುರುಮಾಡ್ತ್
ದೆವ್ವ ನಂಗಲ್ಲ ಬುಡ್ಸಿನೆ ನಿಮ್ಮದ್
ಮಾಯ್ಪುನ ಸೂಡಿಗೆ ಕೈ ಹೋತು

ಕೋಣೆಂದ ಕೋಣೆಗೆ ಓಡುವ ಸಾಂತನ
ಓಟದ ಪಾಡ್ ಲಾಯ್ಕಿತ್ತ್
ಕೋಣನ ಬೊಳ್ಳಿಲಿ ನೇಲುವ ಪಂಚೆ
ಸಾವಿರ ಕಣ್ಣ್‌ಲಿ ನೋಡ್ತಿತ್ತ್

ಸಾಂತಪ್ಪ ಮರ ಕೊಚ್ಚಿತ್

ಜಾಳ್ತೆ ಗದ್ದೆಗೆ ಕಡಿಯೊಕು ಸೊಪ್ಪುಂತ
ಸಾಂತಪ್ಪಣ್ಣಂಗೆ ನೆಂಪಾಗಿ
ಕರಿ ಮೈ ಬುಟ್ಟ್ ಕೋಮಣ ಕಟ್ಟಿ
ಮೊತ್ತಿ ಮರಕಂಡ್ ಹತ್ತಿತ್ತ್.

ಸೊಪ್ಪು ತುಂಬಿಕಂಡ್ ಸೇಂಕುವ ಮೊತ್ತಿ
ಪಚ್ಚೆ ತೇರ್‌ನ ಹಾಂಗಿತ್ತ್
ಬರಿವವನನು ಗಡಿ ಹಾಕುವವನನೂ
ಕರ್ದ್ ಮಾತಾಡ್ಸುವ ಹಾಂಗಿತ್ತ್.

ಮರಲಿ ಸೊಪ್ಪಿರುದೆ ನಂಗೇಂತೇಳಿ
ಸಾಂತಪ್ಪಣ್ಣ ತಿಳ್‌ಕಂಡ್
ಒಂದೇ ಒಂದು ಗೆಲ್ಲ್‌ನ ಬುಡದೆ
ಕೊಚ್ಚಿ ಕೊಡೀಗೆ ಹೋಗಿತ್ತ್

ಸೊಪ್ಪುನು ಇಲ್ಲದೆ ಗೆಲ್ಲ್‌ನು ಇಲ್ಲದೆ
ಮರ ಬೋಳಾಗಿ ನಿತ್ತಿತ್ತ್
ಕರಿಮೈ ಸಾಂತಂಗು ಕರಿಯ ಮೊತ್ತಿಗು
ಬಾರಿಲಾಯ್‌ಕ್ ಮೇಚಾತಿತ್ತ್.

ದೂರದ ನೋಟ ಲಾಯ್‌ಕನ ಗಾಳಿ
ಸಾಂತ ಹಕ್ಕಿನಾಂಗಾಗೋತು
ಹಾಂಗೆ- ಹೀಂಗೆಂತ ಗೇನ ಮಾಡಿಕನ
ಏನ್ ಎತ್ತಂತ ಮರ್ತ್ತೋತು

ಸಾಂತಪ್ಪ ಮರ ಕೊಚ್ಚಿತ್

ಮರದ ಕೊಡೀಲಿ ನಿತ್ತಂವ ಸಾಂತ
ಇಳಿಯಕೆ ಏನೋ ಸುರುಮಾಡ್ತ್
ಚುಡಂಕ್‌ಂತೇಳಿ ಕತ್ತಿನ ತೆಗ್‌ದ್
ಪಟ್ಟೆನೂಲುಗೆ ಸೆಕ್ಕ್‌ಸಿತ್.

ನೂಲು ತುಂಡಾಗಿ ಕತ್ತಿ ಬೀಳ್ತಿತ್ತ್
ಸೀತಮ್ಮ ಮನೆಗೇ ಓಡ್ಯೋತು.
ಸಾಂತನ ಬೊಬ್ಬೆಗೆ ಮೊತ್ತಿಮರಕ್ಕೂ
ಸಣ್ಣಂಗೆ ಹಂಞ್ಞ ನೆಗೆಬಾತ್

ಅಡ್ಡ ಹಿಡಿಯಕೆ ಸೊಪ್ಪೂ ಇತ್ತ್‌ಲೆ
ಕೊಡಿಮರ ಕೈ ಬುಡುವಾಂಗಿಲ್ಲೆ
ಎತ್ತ ತಿರ್ಗಿರೂ ಹೇಂಗೆ ನಿತ್ತರೂ
ಸಾಂತನ ಸುರ್ಪಕೆ ಮರೆ ಇಲ್ಲೆ

ಕೊಚ್ಚಿದ ಸೊಪ್ಪೇ ಕಡೆಗೂ ಸಾಂತನ
ಹೋವ ಮಾನನ ಕಾಪಾಡ್ತ್
ಕಡೆಕಾಲಕೆ ಗೆತಿ ಕೊಡೆಕೋಲುಂತ
ಹೇಳುವ ಗಾದೆನು ನೆಂಪಾತ್.

ಹಾರುವ ಕಕ್ಕೆ ಓಡುವ ಕುಂಡತ
ನೋಡಿರು ಏನೂ ಹೇಳ್ತೇಲೆ
ಬೇಸಿ ತಿಂದ್ ಮೈ ಮುಚ್ಚುವ ಮೊನ್ನಂಗೆ
ಎಷ್ಟ್ ಹೇಳಿರೂ ಪಲ ಇಲ್ಲೆ.

ಸಾಂತಪ್ಪ ಮರ ಕೊಚ್ಚಿತ್



ಸಾಂತನ ಆಮ್ಲೆಟ್

ಆಟಿನ ಆದ್ರೆಗೆ ಅರೆಬರೆ ಚೆಂಡಿ
ಗದ್ದೆಂದ ಬಾತಿತ್ತ್ ಸಾಂತಪ್ಪ
ನಾಟಿ ಮುಗ್ದಾಂಗೆ ದೂರದ ತೌರುಗೆ
ಹೋಗಿ ಕುದ್ದಿತ್ತ್ ಸೀತಮ್ಮ

ಸೊಂಟಲಿ ಬುಟ್ಟರೆ ಸಾಂತನ ಮೈಲಿ
ಬಟ್ಟೆಂತೇಳುದು ಇತ್ತೇಲೆ
ಮಾಸಿದ ತೋರ್ತು ಮುಂಡಾಸಾಗಿ
ಹತ್ತಿತ್ತ್ ಅವನ ತಲೆಮೇಲೆ

ಬೊಳ್ಪಿಗೆ ಕುಡ್ದ ಅಂಬುಲಿ ಮೊಜ್ಜಿಗೆ
ಮದ್ಯಾನ್ನ ಬೇಡಾಂತಾಗಿತ್ತ್
ತಿಂದದೆ ತಿಂದ್ ನೋಡ್ದೇ ನೋಡಿ
ಸಾಂತಂಗೆ ಬಿಡ್ದೇ ಹೊಗಿತ್ತ್

ಮನೆ ಎಜ್‌ಮಾನ್ತಿ ಮನೆ ಒಳೆಗಿಲ್ಲೆ
ಅಡಿಗೆ ಕೋಣೆನೂ ಸಾಂತನ ಕೈಲೇ
ರುತಿ ರುತಿ ಮಾಡಿ ಕುಸಿ ಕುಸಿ ತಿಂಬಕೆ
ಸಾಂತಂಗೆ ಮನ್ಸಾತ್

ಕಾಪುನ ಮೊಟ್ಟೆ ಕೈತುಂಬ ತಂದ್
ನೀರುಳ್ಳಿ ಮೆಣ್ಸ್ ಪಾಕನು ಆತ್
ಹೊಟ್ಟಿದ ಕೆಬಿಗೂ ಕೇಳುವ ಹಾಂಗೆ
ಕೊಟ ಕೊಟ ಹೊಡ್ದಾತ್

ಕೋಟ ಗಾಳಿಗೆ ಒಲೆ ಬುಡ ಬೆಚ್ಚ
ಕಳ್ಳ್‌ಗೆ ಸಾಂತನ ಮನ್ಸೂ ಬೆಚ್ಚ
ಕಾಸಿದ ಮೊಟ್ಟೆನ ಊಟದ ಕನ್ಸ್
ತಲೆಲಿ ತುಂಬಿಬುಡ್ತ್

ಎಣ್ಣೆಲಿ ಬೆಣ್ಣೆಲಿ ಬೇಸೊಕ್ಕೊಂತ
ಕಲ್ಸಿದ ಮೊಟ್ಟೆನ ತಕಂಡ್ ಸಾಂತ
ಒಲೆಮೇಲೆ ಬಾರೀ ಲಾಯ್ಕ್‌ಲಿ ಒಂದು
ಆಮ್ಲೆಟ್ಟ್ ಹೊಯ್ದಿತ್ತ್

ಅರ್ಕಿಲ್ ಬಿಸ್‌ಲಿಗೆ ಒಳ್‌ಂಗಿದ ಸೌದೆಲಿ
ದಗ ದಗ ಕಿಚ್ಚಿ ಹೊತ್ತಿಕಂಡಿತ್ತ್
ಕಳ್ಳ್‌ನ ಮತ್ತ್‌ಲಿ ಸಾಂತಪ್ಪಣ್ಣ
ಕಾವುಲಿ ಮರ್ತಿತ್ತ್

ಹೊತ್ತುವ ಕಿಚ್ಚಿಲಿ ಕಲ್ಸಿದ ಮೊಟ್ಟೆ
ಚಟಪಟಗುಟ್ಟಿ ಬೆಂದ್‌ಕಂಡಿತ್ತ್
ಚುರ್ಕರ ಕುದ್ದ ಸಾಂತಪ್ಪಣ್ಣ
ಕುದ್ಕನ ಹಾಂಗಿತ್ತ್

ಕರ್‌ಂಟಿದ ಮೊಟ್ಟೆನ ಪೊರ್ಮರ್ಳ ಹಿಡ್ದ್
ಆಚೆಮನೆಂದ ಸೇಸನು ಬಾತ್
ಬುದ್ದಿ ಮಾತ್‌ನ ಕೇಳಿ ಸಾಂತಂಗೆ
ಪಿತ್ತ ನೆತ್ತಿಗೇರ್ತ್.

ಮುಂದೆನ ಕತೆನೂ ಲಾಯ್ಕೇ ಇತ್ತ್
ಕೇರಿಗೆ ಕೇರಿನೆ ಸೇರಿಕಂಡಿತ್ತ್
ಸಾಂತನು ಸೇಸನು ಮಾತಾಡಿಕಂಬೊದು
ಮೈಲ್ ದೂರ ಕೇಳ್ತ್.

ಸಾಂತನ ಆಮ್ಲೆಟ್

ಸಾಂತನ ಪ್ರಶ್ನೆ

ಆಟದ ಬೊಳ್ಳಿರಿ ಆಡಿಕಂಡಿತ್ತ್
ಆನೆ ಬೆನ್ನ್ ಮೇಲೆ
ತೋಟೆನು ಇತ್ತ್‌ಲೆ ಕೇಪುನು ಇತ್ತ್‌ಲೆ
ಬೇಟೆಗೆ ಕೈ ಕಾಲೇ

ಹುಳ್ಳಂಗೆ ತಿಂಬಕೆ ಇಲ್ಲದೆ ಸಾಂತಂಗೆ
ಬಾರಿ ಕಷ್ಟ ಆದೆ
ಹೀಂಗಿರಿಕಾಕನ ಒಂದುದಿನವಂಗೆ
ಬೇಟೆಗೆ ಮನ್ಸಾದೆ

ಕಣ್ಣ್‌ಗೆ ಕಾಣದ್ದ್ ದೊಣ್ಣೆಗೆ ಸಿಕ್ಕದ್ದ್
ಹಾರುವ ರುತಿ ಮಾಸ
ಹಿಡಿವ ಉಪಾಯನ ಹೇಳಿಕೊಟ್ಟತ್
ಆಚೆಮನೆನ ಸೇಸ

ಗೋಳಿನ ಮಾಯಣ ಹಲ್ಸಿನ ಮಾಯಣ
ಬೀಜದೆಣ್ಣೆ ಹಾಕಿ
ಮಿಜಿಯುವ ಸಾಂತನ ಸೀತಮ್ಮ ನೋಡ್ತ್
ತಲೆನ ಅಡ್ಡ ಹಾಕಿ

ಗೈಪುನ ಅಳೆಗೆಲಿ ಮಾಯಣ ಕೊದ್ದತ್
ಸೀತೆ ಕೆಂಡ ಆತ್
ಚಳ ಪಳ ಕೊದಿವ ಮಾಯಣದೊಟ್ಟಿಗೆ
ಸಾಂತ ಏಲಿ ಹೋತು

ಸಾಂತನ ಪ್ರಶ್ನೆ

ಬೊಳ್ಳಿಗೆ ಎದ್ದ್ ಹೋದಂವ ಸಾಂತ
ಬಲ್ಲೆಬಳೆಗೆ ಕೊತ್ತಿ
ಹಕ್ಕಲೆ ಚೀಲನು ಸಂಚಿ ಎಲಾಡಿಕೆ
ಕೈಲಿ ಒಂದು ಕತ್ತಿ

ಕುದ್ದ ಸೇಸನ ತಲೆಮೇಲೆ ಇತ್ತ್
ಚೋರೆ ಹಕ್ಕಿ ಗೂಡು
ಕೀಂ ಕೀಂತೇಳಿ ಮರ್‍ಡುವ ಹಕ್ಕಿನ
ಗೂಡುಗಿಲ್ಲೆ ಮಾಡ್

ಗೆಲ್ಲ್‌ಲಿ ಹೋವ ಕೇರೆ ಹಾವುನ
ಸಾಂತ ನೋಡಿಬುಡ್ತ್
ಅಯ್ಯೋ ಮೊರಿಗಳ ತಿಂದದೆಂತೇಳಿ
ದೊಣ್ಣೆ ಬೇರಿ ಹೊಡ್ತ್
ಮಾಯಣ ಮೆತ್ತಿ ಹಕ್ಕಿಗ ಬಿದ್ದೊ
ಸಾಂತಂಗೆ ಬಾರಿ ಕುಸಿ
ಬೇಸಿ ಕಾಸಿ ತಿಂಬ ಕನ್ಸೇ ಕಟ್ಟಿತ್
ಕುದ್ದಲ್ಲೆ ಹೊಟ್ಟೆ ಇಸಿ

ಬೊಡ್ದ್ ಬೊಡ್ದ್ ಕೊಂದದೆ ಸಾಂತಪ್ಪ
ಪುರುಸೊತ್ತೇ ಇಲ್ಲೆ
ರೆಂಕೆ ಮುಲ್ಲೆ ತಲೆ ಚೊಲ್ಲಿ ಇಟ್ಟದೆ
ಅಯ್ಯೋಂತಾತೇಲೆ

ತುಂಬಿದ ಚೀಲ ತುಂಬಿತ್ ಅಳೆಗೆ
ಸಾಂತಂಗೆ ಬಾಯ್ನೀರ್
ಆಚೆಮನೆಂದ ಸೇಸನು ಬಾತ್
ಇನ್ನ್ ತಡೆಂವ ಯಾರ್

ಕೊಂದರೆ ಪಾಪ ತಿಂದ್ ಪರಿಹಾರ
ಹಿರಿಯರ ಮಾತುಟ್ಟು
ಕೊಲ್ಲದಿದ್ದರೆ ತಿಂಬೊದು ಹೇಂಗೆಂತ
ಸಾಂತ ಕೇಳುತುಟ್ಟು.

ಸಾಂತನ ಪ್ರಶ್ನೆ

ಅದ್ ಬಂದಮೇಲೆ

ಅಂತೂ
ಒಂದು ದಿನ ಅದ್ ಬಾತ್.
ಅದ್ ಬಂದಮೇಲೆ
ಎಲ್ಲ ಬದ್‌ಲಾತ್
ಕಾಲನೂ ಕೋಲನೂ ಕೆಲ್ಸನೂ ಮನ್ಸನೂ-
ಎಲ್ಲ ಅಡಿಮೇಲೆ
ಮನ್ನೆ ಮನ್ನೆ ಸರಿ ಇತ್ತ್, ಸಡನ್ನೆ-
ಇಂವ ಹೇಂಗಾತ್‌ಯ ಹೀಂಗೆಂತ
ಮೂಕುನ ಮೇಲೆ ಬೆರ್ಲ್ ಇಸಿದ ಪ್ರಶ್ನೆಗೆ
ನಾಲಿಕೆನ ಸೆಟ್ಟ್‌ಗ ಹೇಂಗೋ ಮೊಗ್‌ಚಿ ಮೊಗ್‌ಚಿ
ಜೋಡ್ಸಿ ಕೊಟ್ಟೊ ಉತ್ತರ.
ಆ ಮೇಲೆ ಹಂಞ ಬದ್‌ಲೂ ಆವುಟು
ಇವನ ತೋರ- ಎತ್ತರ.
ಮತ್ತೆ - ತೊಂದರೆ ಇಲ್ಲೆ,
ಕಾಲ ಕಾಲಕ್ಕೆ ಮಳೆ ಬರದಿದ್ದರೂ
ಮನೆ ಒಳೆಗೆ ತಂಪಾತ್
ಹೊತ್ತೇನೋ ಮಾಮೂಲುನಾಂಗೆ ಬಿಳಿಯೇ ಇತ್ತ್,
ಆದರೆ ಇವನ ಕಣ್ಣ್‌ಗೆ ಮಾತ್ರ
ಕೆಂಪು ಕಾಂಬತಿತ್ತ್
ಆಗ ಹನ್ಕುವ ಹನಿಮಳೆಗೂ ಮೂಡಿ ಬಾತಿತ್ತ್
ಎಂಥ ಕಾಮನ ಬಿಲ್ಲ್ !
ಆ ಕಾಲಕೆ ಒಂದು ಲೆಕ್ಕನೇ ಆತಿತ್ತ್‌ಲೆ
ಹೋಟ್ಳ್ ಬಿಲ್ಲ್

ಅಗಿಯಕನ ಕಲ್ಲೇ ಸಿಕ್ಕಿರೂ ಕೇರೇ ಮಾಡ್‌ತಿತ್ತ್‌ಲೆ ಹಲ್ಲ್.
ಸಮ್ಮಂದನೋ ಅತ್ತ ಮುಗಲ್ ಇತ್ತ ಕಡಲ್.
ನಡುಲಿ ಎಷ್ಟೊಂದು ಕುಸಾಲ್
ಹಕ್ಕಿ ಹಾರ್‌ತಿತ್ತ್, ಮೀನ್ ಮೀಸ್‌ತಿತ್ತ್
ಯಾಗೋಳು ತುಂಬಿಯೇ ಇರ್‌ತಿತ್ತ್ ಮನ್ಸ್‌ನ ಚೀಲ
ಹೇಂಗೆ ಬೇಕರೂ ಅದ್‌ಲ್ ಬದ್‌ಲಾತಿತ್ತ್
ತಲೆ ಮತ್ತೆ ಬೀಲ
ಯಾವ ಪುಡೆಗೆ ಇಂಜಿನ್ ಸೆಕ್ಕ್‌ಸಿರೂ ಓಡುವ ಬೋಗಿ
ನೋಡಿಬರುಕುಂತಾತಿತ್ತ್ ಸೊರ್ಗಕೂ ಒಮ್ಮೆ ಹೋಗಿ.

ಹಾಂಗೂ ಹೀಂಗೂ ಹಿಂಬೊತ್ತಾತ್
ಚಪ್ಪರ ಒಂದೇ,
ಅದರ ತುಂಬ, ಹಾಗಲ ಕುಂಬಳ
ಅದರ್‍ೂ ಮರಿವಹಾಂಗೆ ಮಾಡ್‌ತಿತ್ತ್
ಅಲ್ಲಿ ದಿನಾನು ನಡಿವ ಕಂಬಳ
ಸುತ್ತೆಲ್ಲ ಚೆಂಡ್ ಹೊಡ್ದ ಕಳ
ಆದರೂ ಎಳಿಯತಿತ್ತ್
ಬಾರೀ ದೂರಂದ ಬುಟ್ಟ ಒಂದು ಬುಡುಗಾಳ

ಏಳ್ ಸಾಲ್ ಹೂಡೊಕಡ
ನಾಟಿ ಮಾಡಿಕೆ,
ಏಳ್ ತಿಂಗ ಬೇಕೇ ಬೇಕು
ಕಾಯಿಕಟ್ಟಿ ಕಣೆದಾಂಗಿ,
ಹೊಂಗದ್‌ರಾಗಿ ಕೊಯ್ಯಕೆ
ಕೊಯಿದ ಮೇಲೂ ಕೂಡ ಎಷ್ಟೊಂದು ಕೆಲ್ಸ
ಮಿದ್ದ್, ಹೊಡ್ಕಿ ಕಾಸಿ ಬೀಸಿ ಬೇಸಿ
ಆರೇ ಬೆರ್ಲ್‌ಗ ಎಷ್ಟೊಂದು ಸರ್ತಿ ಒತ್ತಿ ತಟ್ಟಿದ ರೊಟ್ಟಿ!
ಓಡುಂದ ಕೆಂಡಕೆ ಹಾಕಿ

ಅದ್ ಬಂದಮೇಲೆ

ಕಡೆಗೆ ಬುಗ್ಗ್ಂತ ಬಂದ್ ಗುಳ್ಳೆ
ಬಿಸಿಗೆ ಏಲುವ ಬೆಣ್ಣೆನೊಟ್ಟಿಗೆ ಆಹ
ಎಂಥ ರುತಿ?
ಹೇಳಿರೆ ಅದಿಯೇ ಒಂದು ರಾಮಾಯಣ ಮಾರ್ರೆ
ಹೇಳುವಾಂಗೂ ಇಲ್ಲೆ, ಬುಡುವಾಂಗೂ ಇಲ್ಲೆ
ಇರುದೇ ಹಾಂಗೆ– ಅದ್ ಅಂಥ ಬಲ್ಲೆ.
ಕೇರುದು ಕೊಡ್ಪುದು ಬುಟ್ಟೆ ಏನೂ ಕಾಂಬೊದುಲೆ
ಅಲ್ಗುದು ಮಾತ್ರ ಬೆರೀ ಮುಲ್ಲೆ.

ಬಿತ್ತುವ ಹದ ಗೊತಿದ್ದಂವಂಗೆ ಕೊಯ್ಯುದೂ ಗೊತ್ತುಟು
ಹೇಂಗಾದೆನೋ ಏನೊಂತ
ಎಡೆಲಿ, ಇವನಮಂಡೆ ಹಂಞ ಬಿಸಿನೂ ಆವುಟು.
ಪೈರ್– ಹುಟ್ಟುವ ಗದ್ದೆನೇ ಬೇರೆ
ನಡುವ ಗದ್ದೆನೇ ಬೇರೆ.
ಗುರ್ತ ಮರ್ತದೆ ಒಮ್ಮೊಮ್ಮೆ
ಎಲ್ಲಾಕಡೆ ಒಂದೇ ತರದ ಬೆದೆ ಬಂದಮೇಲೆ.
ಅಪ್ಪ ನಟ್ಟ ಚಾಳೆ ಕೊಟ್ಟೆ ಆವುಟು
ಕಮ್ಮುಲಿನೂ ತುಂಬ ಒಟ್ಟೆ ಆವುಟು
ಕೊಡ್ಪುವ ಮರಕೊಡ್ಪಂಗೆ ಹೊಟ್ಟೆನೂ ತುಂಬಿಟು
ಆದರು ಒಂದೆರ್ಡ್ ಕಾಯಿ, ಗೋಟಡಿಕೆ
ಆಗೀಗ ಬಿದ್ದ್‌ಕಂಡುಟ್ಟು.
ಮಾರಿ ಬೊದ್ಕುದು ಆಗದಿದ್ದರೂ
ತಿಂದ್ ಬೊದ್ಕಿಕೆ ತೊಂದರೆ ಇಲ್ಲೆ.
ಹೇಂಗೂ ಈಗ
ಅದ್
ಬಂದುಟು.

ಅದ್ ಬಂದಮೇಲೆ

ಗಾಳಿ - ಗಮಲ್‌ನ ಹಾಂಗೆ.
ನೀರ್ - ಮೀನ್‌ನ ಹಾಂಗೆ
ಇಲ್ಲಿ ಬೊಧ್ಕಿ ಬಾಳೀ
ಎಷ್ಟೇ ರಾಸಿ ಹಾಕಿ
ಎಂತಾ ಮಾಳಿಗೆ ಕಟ್ಟಿ
ಹೋದು ಬೆರೀ ಕೈಲೀ

ನೆಗೆಬೇಕು ಕೆಲಿದಗೆ ಸೋನೆ ಹಾಂಗೆ



ಕರುಣಾಕರ